Swabhimani Sahakari
Pages : 36 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 06
June - 2021

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಜೂನ್..೫
ವಿಶ್ವ ಪರಿಸರ ದಿನ

2021 ವಿಶ್ವ ಪರಿಸರ ಧ್ಯೇಯ:
ಪರಿಸರ ವ್ಯವಸ್ಥೆ ಪುನಃಸ್ಥಾಪನೆ

ಹೊಸ ಹೂವಿನ ಕಂಪು ಹಸುರು,
ಎಲರಿವ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು;
ಹಸುರು ಹಸುರಿಳೆಯುಸಿರೂ!

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ!

–ಕುವೆಂಪು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5300

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1383

ಅಧ್ಯಕ್ಷರ ನುಡಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಈ ವಿಷಮ ಪರಿಸ್ಥಿತಿಯಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಅನೇಕ ತೊಂದರೆಗಳಾಗಿರುವುದನ್ನು ಸಂಯುಕ್ತ ಸಹಕಾರಿಯ ಗಮನಿಸಿದೆ. ಈ ತೊಂದರೆಗಳನ್ನು ನಿವಾರಿಸಿ ಕೊಡುವಂತೆ ರಾಜ್ಯದ ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಮಾನ್ಯ ಸಹಕಾರ ಸಚಿವರನ್ನು ವಿನಂತಿಸಿದೆ. ಅವರುಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಧ್ಯದಲ್ಲಿಯೇ ಈ ತೊಂದರೆಗಳನ್ನು ನಿವಾರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸರಕಾರ ಪೂರ್ಣ ಪ್ರಯತ್ನ ಮಾಡುತ್ತದೆ

# ರಾಜ್ಯದ ಸೌಹಾರ್ದ ಸಹಕಾರಿಗಳು ಆರ್ಥಿಕ ಭದ್ರತೆಯತ್ತ (ಸೇಫ್ ಝೋನ್) ಗಮನ ಹರಿಸುವುದು ಅಗತ್ಯ. ಸೌಹಾರ್ದ ಸಹಕಾರಿಗಳ ಆಡಳಿತಾತ್ಮಕ ತೊಂದರೆಗಳ ಪರಿಹಾರಕ್ಕೆ ಸಂಯುಕ್ತ ಸಹಕಾರಿಯ ನಿರಂತರ ಪ್ರಯತ್ನ.

**ಆತ್ಮೀಯ ಸಹಕಾರಿಗಳಿಗೆ ಹೃದಯ ಪೂರ್ವಕ ನಮಸ್ಕಾರಗಳು,**

ಕೋರೋನಾ–19 ಮಹಾಮಾರಿಯ 2ನೇ ಅಲೆಯ ಸಂದರ್ಭದಲ್ಲಿ ಜನತಾ ಕರ್ಫ್ಯೂ ಹಾಗೂ ಲಾಕ್‌ಡೌನ್ ನಂತಹ ವಿಷಮ ಸಂದರ್ಭದಲ್ಲಿ ತಾವುಗಳು ಹಾಗೂ ತಮ್ಮ ಕುಟುಂಬ ವರ್ಗದವರು ಆರೋಗ್ಯವಾಗಿದ್ದಾರೆ ಎಂಬು ಭಾವಿಸುತ್ತೇನೆ. ತಾವುಗಳು ತಮ್ಮ ಪರಿಸರದಲ್ಲಿ ಈ ಮಹಾಮಾರಿಯನ್ನು ತಡೆಗಟ್ಟುವ ಪ್ರಯತ್ನಗಳನ್ನು ಮುಂದುವರೆಸಲು ವಿನಂತಿಸುತ್ತೇನೆ. ಹಾಗೂ ಈ ಮಹಾಮಾರಿಯಿಂದ ಪೀಡಿತರಾದವರಿಗೆ ಹಾಗೂ ಅವರ ಕುಟುಂಬಗಳಿಗೆ ಸಾಧ್ಯವಿರುವ ಅಗತ್ಯ ನೆರವು ನೀಡುವ ಕ್ರಮಗಳನ್ನು ಜಾರಿಯಲ್ಲಿಡಬೇಕೆಂದು ವಿನಂತಿಸುತ್ತೇನೆ.

ಈ ವಿಷಮ ಪರಿಸ್ಥಿತಿಯಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಅನೇಕ ತೊಂದರೆಗಳಾಗಿರುವುದನ್ನು ಸಂಯುಕ್ತ ಸಹಕಾರಿಯ ಗಮನಿಸಿದೆ. ಈ ತೊಂದರೆಗಳನ್ನು ನಿವಾರಿಸಿ ಕೊಡುವಂತೆ ರಾಜ್ಯದ ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಮಾನ್ಯ ಸಹಕಾರ ಸಚಿವರನ್ನು ವಿನಂತಿಸಿದೆ. ಅವರುಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಧ್ಯದಲ್ಲಿಯೇ ಈ ತೊಂದರೆಗಳನ್ನು ನಿವಾರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸರಕಾರ ಪೂರ್ಣ ಪ್ರಯತ್ನ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಕೋರೋನಾ ಮಹಾಮಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಕಷ್ಟವನ್ನು ತಂದೊಡ್ಡಿದೆ. ಈ ಲಾಕ್‌ಡೌನ್ ಸಮಯದಲ್ಲಿ ಏನು ಮಾಡಬೇಕು ಲಾಕ್‌ಡೌನ್ ಅವಧಿಯ ನಂತರ ಏನು ಮಾಡಬೇಕು ಈ ಸಮಯದಲ್ಲಿ ಏನು ಮಾಡಬಾರದು ಎಂಬ ಬಗ್ಗೆ ಸೌಹಾರ್ದ ಸಹಕಾರಿಗಳು ಗಂಭೀರವಾಗಿ ಚಿಂತಿಸಿ ಒಂದು ಪೂರ್ಣಪ್ರಮಾಣದ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಅದರಂತೆ ಅನುಷ್ಠಾನಗೊಳಿಸುವುದು ಅಗತ್ಯ. ಠೇವಣಿಗಳನ್ನು ಸ್ವೀಕರಿಸುವುದಾಗಲಿ, ಹೊಸ ಸಾಲಗಳನ್ನು ಸ್ವೀಕರಿಸುವುದಾಗಲಿ, ಹೊಸ ಯೋಜನೆಗಳನ್ನು ಜಾರಿಗೊಳಿಸುವುದಾಗಲಿ ಯಾವುದನ್ನು ಆತುರದಲ್ಲಿ ಮಾಡದಿರುವುದು ಸೂಕ್ತವೆನಿಸುತ್ತದೆ. ಅನಗತ್ಯ ವೆಚ್ಚಗಳ ಕಡಿಮೆ ಮಾಡುವುದು. ಕೇವಲ ಅಗತ್ಯ ವ್ಯವಹಾರಗಳನ್ನು ಮಾಡುತ್ತ "ಸೇಫ್ ಝೋನ್" ಭದ್ರ ವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು ಇಂದಿನ ಅವಶ್ಯಕತೆ ಎಂದು ಸಂಯುಕ್ತ ಸಹಕಾರಿಯ ನಿಲುವಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಮುಂಬರುವ ದಿನಗಳು ಅನೇಕ ಸವಾಲುಗಳನ್ನು ಅವುಗಳ ಜೊತೆಗೆ ಅನೇಕ ಅವಕಾಶಗಳು ಒದಗಲಿವೆ ಎಂದು ನನ್ನ ಭಾವನೆ. ಸದಸ್ಯರ ಬೇಕು ಬೇಡಿಕೆಗಳಿಗೆ ಸ್ಪಂದಿಸುವುದು, ಸೌಹಾರ್ದ ಸಹಕಾರಿಯ ಅಸ್ತಿತ್ವಕ್ಕೆ ಧಕ್ಕೆ ಬಾರದಂತೆ ಆಡಳಿತ ನಡೆಸುವುದು, ಸರಕಾರ, ಸಾರ್ವಜನಿಕರು ಹಾಗೂ ಸಹಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು, ಆರ್ಥಿಕ ಶಿಸ್ತು ಪಾಲಿಸುವುದು ಹಾಗೂ ಅನಗತ್ಯ ಯೋಜನೆಗಳನ್ನು ಕೈಬಿಡುವುದು ಇವುಗಳಿಗೆ ಗಮನವಿಡುವುದು. ಸೌಹಾರ್ದ ಸಂಯುಕ್ತ ಸಹಕಾರಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಹಿತಾಸಕ್ತಿ ಕಾಪಾಡುವುದರಲ್ಲಿ ಬದ್ಧತೆಯನ್ನು ಹೊಂದಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಆಶಯಕ್ಕೆ ಹಾಗೂ ಕಾರ್ಯಕ್ರಮಗಳಿಗೆ ಸ್ಪಂದಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಲು ಕೋರುತ್ತೇನೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ..........5–10, 17–24
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 11–16
ಆರ್.ಬಿ.ಐ ಸುತ್ತೋಲೆ .......... 25–31
**ಲೇಖನಗಳು :**
ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ – ಪ್ರಾಮುಖ್ಯತೆ .......... 32–33
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–14) .......... 35–36

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳಲ್ಲಿ ದಾಖಲಾತಿಗಳ ನಿರ್ವಹಣೆಯ ಪರಿಪಕ್ವತೆಗೆ ಆದ್ಯತೆ ಇರಲಿ.

ಸಹಕಾರಿ ಕ್ಷೇತ್ರಕ್ಕೆ 117 ವರ್ಷಗಳು ಕಳೆದಿವೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರ ತನ್ನದೆ ಆದ ಕೊಡುಗೆಯನ್ನು ಕೊಡುತ್ತ, ಅನೇಕ ಏಳು ಬೀಳುಗಳನ್ನು ಕಂಡಿದೆಯಾದರೂ ಸಹಕಾರ ಕ್ಷೇತ್ರ ಉತ್ತಮ ಆರ್ಥಿಕ ಹಾಗೂ ಸೇವಾ ಕ್ಷೇತ್ರವಾಗಿ ಕಾರ್ಯನಿರ್ವಹಿಸುತ್ತ ಬಂದಿದೆ. ಸರಕಾರಗಳ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಏಕೈಕ ವ್ಯವಸ್ಥೆಯಾಗಿ ರೂಪುಗೊಂಡು ವಿಶ್ವದ ಅತಿದೊಡ್ಡ ಸಹಕಾರಿ ವ್ಯವಸ್ಥೆಯಾಗಿ ಬೃಹದಾಕಾರವಾಗಿ ಬೆಳೆದಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಈಗ 20 ವರ್ಷ ಕಳೆದಿವೆ. ರಾಜ್ಯದ ಸಹಕಾರಿಗಳ, ಸಾರ್ವಜನಿಕರ ಹಾಗೂ ಸರಕಾರದ ಗಮನ ಸೆಳೆಯುತ್ತ ಸಾಂಖಿಕವಾಗಿ ಗುಣಾತ್ಮಕವಾಗಿ ಬೆಳೆಯುತ್ತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಗಮನವನ್ನೂ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಸಾಂಪ್ರದಾಯಿಕ ಸಹಕಾರ ಸಂಸ್ಥೆಗಳಿಗೆ ಸುದೀರ್ಘ ಕಾರ್ಯನಿರ್ವಹಿಸಿರುವ ಅನುಭವದ ಹಿನ್ನೆಲೆಯಲ್ಲಿ ಈ ವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲಿ ದಾಖಲಾತಿಗಳ ನಿರ್ವಹಣೆ ತಕ್ಕಮಟ್ಟಿಗೆ ಸಮರ್ಪಕವಾಗಿದೆ. ಆದರೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ದಾಖಲಾತಿಗಳ ನಿರ್ವಹಣೆಯು ಸಮರ್ಪಕವಾಗಿ ಇನ್ನೂ ನಿರ್ವಹಿಸಬೇಕಾಗಿದೆ ಎಂಬುದು ಹಲವು ಸಹಕಾರಿಗಳ ಅಭಿಪ್ರಾಯವಾಗಿದೆ. ಸಂಯುಕ್ತ ಸಹಕಾರಿಯು ಹಲವಾರು ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ಮಾಡುವಾಗ ಗಮನಿಸಿರುವ ಅಂಶವೂ ಇದೆ ಆಗಿದೆ. ಸೌಹಾರ್ದ ಸಹಕಾರಿಗಳು ಆಧುನಿಕ ತಂತ್ರಜ್ಞಾನದ ಕಡೆಗೆ ಹೆಚ್ಚಿನ ಗಮನವನ್ನು ನೀಡಿವೆಯಾದರೂ ಸಹಕಾರಿಗಳ ಕಾರ್ಯನಿರ್ವಹಣೆಯ ಪರಿಪೂರ್ಣ ದಾಖಲಾತಿಗಳ ನಿರ್ವಹಣೆಯ ಕಡೆಗೆ ಗಮನಹರಿಸಿರುವುದಿಲ್ಲ ಎಂಬುದು ತಿಳಿಯುತ್ತದೆ.

ಮುಂಬರುವ ದಿನಗಳಲ್ಲಿ ಈ ನ್ಯೂನತೆಯನ್ನು ಸರಿಪಡಿಸಿಕೊಳ್ಳುವುದು ಅವಶ್ಯಕವೆನಿಸಿದೆ. ಸೌಹಾರ್ದ ಸಹಕಾರಿಗಳಿಗೆ ಅನೇಕ ಸವಾಲುಗಳಿವೆ ಮತ್ತು ಅನೇಕ ಅವಕಾಶಗಳು ಇವೆ. ಈ ಸವಾಲುಗಳನ್ನು ಸ್ವೀಕರಿಸಿ ಸಮರ್ಪಕವಾಗಿ ಎದುರಿಸಲು ಹಾಗೂ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ದಾಖಲಾತಿಗಳ ಸಮರ್ಪಕ ನಿರ್ವಹಣೆ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುವುದು ಅಗತ್ಯ. ಈ ನಿಟ್ಟಿನಲ್ಲಿ ರಾಜ್ಯ ಸೌಹಾರ್ದ ಸಹಕಾರಿಗಳು ವಿಶೇಷ ಗಮನಹರಿಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## “ಧರ್ಮೋ ರಕ್ಷತಿ ರಕ್ಷಿತ”

ಶ್ರೇಣಿ 62



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ದೈವ ನಿರ್ಮಿತ ಪ್ರಕೃತಿಗೂ ಮತ್ತು ಮಾನವನನ್ನೊಳಗೊಂಡು ಸಕಲ ಜೀವ ಸಂಕುಲಕ್ಕೂ ಅವಿನಾಭಾವ ಸಂಬಂಧವಿರುವುದನ್ನು ಪರಿಗಣಿಸದೇ ಮಾನವನು ಪ್ರಕೃತಿನಾಶ, ಧರ್ಮ ಸತ್ಯಗಳ ಧಿಕ್ಕರಿಸುವಿಕೆಗಳಿಂದ ಹಿಂದೆಂದೂ ಕಂಡು ಕೇಳರಿಯದ ಕೊರೋನಾ ರೂಪದ ದುರ್ದೆಶೆಯು ಧರೆಯನ್ನು ಆವರಿಸಿ ಮೃತ್ಯು ರೂಪದಲ್ಲಿ ಕೇಕೆಹಾರಿ ಕುಣಿಯುತ್ತಿರುವ ಪರಿಣಾಮವಾಗಿ ಘಟಿಸುತ್ತಿರುವ ಸಾವು ನೋವುಗಳ ದಾರುಣ ಸ್ಥಿತಿಯು ನಮ್ಮೆಲ್ಲರನ್ನು ಭಯದ ರೂಪಕ್ಕೆ ತಳ್ಳಿದೆಯೆಂಬುದು ವಾಸ್ತವಾಂಶ. ಇಂಥಹ ಭೀಭಿತ್ಯ ಸ್ಥಿತಿಯ ಪಕ್ಕರಿಸುವಿಕೆಯ ಭವಿತವ್ಯತೆಯನ್ನು ಅರಿತೋವನೋ ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಪ್ರಕೃತಿಯು ತಾಯಿಯಂತೆ ಮನುಕುಲವನ್ನು ತಿದ್ದುತ್ತಾ, ವಿಕಾಶಗೊಳಿಸುತ್ತಾ ಬಂದಿದ್ದರೂ ದಯಾಹೀನವಾದ ಮಾನವನು ಮಾತ್ರ ಕೃಷಿ, ವಿಜ್ಞಾನ, ಗಣಿಗಾರಿಕೆ, ಶಿಲ್ಪಕಲೆ, ವಾಹನ ಮತ್ತು ಕೃತಕಗೊಬ್ಬರ ತಯಾರಿಕೆ ಮುಂತಾದ ಕಾರಣಗಳನ್ನೊಡ್ಡಿ ಬೆಟ್ಟ ಗುಡ್ಡಗಳನ್ನು ವಿಧ್ವಂಸಗೊಳಿಸಿ ಪ್ರಕೃತಿಯು ನಿರಂತರ ನಾಶದಲ್ಲಿ ತೊಡಗಿಕೊಳ್ಳಬಹುದೆಂಬುದನ್ನು ಮುಂದೃಷ್ಟಿಯಿಂದ ಗ್ರಹಿಸಿ ಪ್ರಕೃತಿ ಸಂರಕ್ಷಣೆಯತ್ತ ಗಮನ ಹರಿಸಲು ತನ್ಮೂಲಕ ಈ ಭೂ ಉಪಗ್ರಹವನ್ನು ದೈವಾನುಗ್ರಹದ ಕೇಂದ್ರವಾಗಿ ಅಭಿವೃದ್ಧಿಗೊಳಿಸಲು ಕರೆಕೊಡುವ ಮೌನ ಸಂದೇಶದ ಪದ್ಯ ಈ ಕೆಳಗಿನಂತಿದೆ.

ಪ್ರಕೃತಿಯನವಂತ ಮನುಜನ ತಿದ್ದುತಿರುವಂತೆ
ವಿಕೃತಿಗೊಳಸುವನವನುಮ್ ಆಕೆಯಂಗಗಳ
ಭೂಕೇಷಿಕ ರಸತಂತ್ರ ಶಿಲ್ಪ ವಾಹನ ಯಂತ್ರ
ವ್ಯಾಕೃತಿಸರೇನವಳ ॥ ಮಂಕುತಿಮ್ಮ ॥ 859

ಕಾಲಚಕ್ರ ಉರುಳುತ್ತಿದೆ. ಕಾಲದ ಓಟಕ್ಕನುಸಾರವಾಗಿ ಮಾನವ ಬುದ್ಧಿ ಗ್ರಾಹ್ಯನಾಗಬೇಕೆಂಬ ಆಂಗ್ಲ ವಾಕ್ಯ ನಮ್ಮನ್ನು ಎಚ್ಚರಿಸುತ್ತದೆ. “Age is not the flight of years but the down of wisdom” ಸಂವತ್ಸರಗಳುರುಳಿದಂತೆ ವಿಜ್ಞಾನ, ವೈದ್ಯಕೀಯ, ರಕ್ಷಣೆ, ಆಕಾಶಯಾನ ಇತ್ಯಾದಿ ಕ್ಷೇತ್ರಗಳಲ್ಲಿ ಅಪರಿಮಿತ ಪ್ರಗತಿ ಸಾಧಿಸಿದ ಮಾನವ ಆದೇಕೋ ಸತ್ಯಪಾಲನೆ, ಧರ್ಮಶ್ರದ್ಧೆ ಮತ್ತು ಪ್ರಕೃತಿ ರಕ್ಷಣೆಗಳ ಬಗೆಗಿನ ಕಾಳಜಿಯನ್ನು ಶೂನ್ಯವಾಗಿಸಿ ಕೊಂಡಿದ್ದಾನೆನ್ನಬಹುದು. ಮಾನವನು ಪ್ರಕೃತಿಯ ಕೂಸು (Man is the child of environment) ಎಂಬುದು ಅಂಗೀಕೃತ ಸತ್ಯ. ಆದರೆ ಪ್ರಕೃತಿ ರಕ್ಷಣೆ ವಿಷಯದಲ್ಲಿ ಕಂಚಿತ್ತೂ ಆದ್ಯತೆ ವಹಿಸುತ್ತಿಲ್ಲ ಎಂಬುದೂ ಅಷ್ಟೇ ಸತ್ಯಾಂಶವಾಗಿದೆ. ನಮ್ಮ ದೈನಂದಿನ ನಡೆಯನ್ನು ಅವಲೋಕಿಸೋಣ. ನಮ್ಮ ವಾಹನವನ್ನು ನಿಲುಗಡೆ ಮಾಡಲು ನೆರಳನ್ನು ಹುಡುಕಿ ನಿಲ್ಲಿಸಿ ವಾಹನವನ್ನು ರಕ್ಷಿಸುವ ಎಚ್ಚರಿಕೆಯನ್ನು ವಹಿಸುತ್ತೇವೆ. ಆದರೆ ಅದೇಕೋ ಮರ ಬೆಳೆಸುವ ಉಳಿಸುವ ಬಗ್ಗೆ ಕಾಳಜಿ ವಹಿಸುತ್ತಿಲ್ಲವೆಂಬುದು ಸತ್ಯಾಂಶ. ಇದು ನಿಜಕ್ಕೂ ದುರ್ದೈವ ನಮಗೆ ಬೇಕಾದಾಗ ಮಾತ್ರ ನೆರಳಿನ ರಕ್ಷಣೆಗಾಗಿ ಪರದಾಡುವ ನಾವುಗಳು ಶಾಶ್ವತವಾಗಿ ಮರಗಳ ಬೆಳವಣಿಗೆಗೆ ಇಂಬು ನೀಡುತ್ತಿಲ್ಲ. ಇಂದಿನ ಅತಿ ಅವಶ್ಯಕತೆಯಾದ ಆಮ್ಲಜನಕದ ಲಭ್ಯತೆಯೂ ಅರಣ್ಯಾಭಿವೃದ್ಧಿಯನ್ನವಲಂಬಿಸಿದೆಯೆಂಬುದೂ ಕಠೋರ ಸತ್ಯ.

ಪ್ರಸಕ್ತ ಆಪತ್ತಿನ ಸಂದರ್ಭದಿಂದಲಾದರೂ ಈ ಭೂಮಿಯ ಮೇಲೆ ವಾಸಿಸಬೇಕಾದ ನಾವು ಈ ಜಾಗದ ಸಮೃದ್ಧಿಗೆ ತನ್ಮೂಲಕ ನಮ್ಮ ಸುಖಕರ ವಾಸ್ತವ್ಯಕ್ಕೆ ನಲೆ ಮಾಡಿಕೊಳ್ಳಲು ನಮ್ಮ ಮನೋ ನಿರ್ಧಾರಗಳಲ್ಲಿ ಕೆಳಗಿನ ಅಂಶಗಳಿಗೆ ಒತ್ತು ನೀಡುವ ಅವಶ್ಯಕತೆಯಿದೆಯೆನಿಸಿದೆ ಅವುಗಳೆಂದರೆ 1. ಅರಣ್ಯ ಸಂರಕ್ಷಣೆ ನಮ್ಮೆಲ್ಲರ ಹೊಣೆ. 2. ಪರಿಸರನಾಶ ನಮ್ಮ ಭವಿಷ್ಯದ ನಾಶ. 3. ಹಸಿರೇ ಉಸಿರು 4. ಧರ್ಮ ಸಂರಕ್ಷಣೆ 5. ಗುರುಹಿರಿಯರಿಗೆ ಗೌರವ ನೀಡಿಕೆ 6. ಎಲ್ಲರೂ ಭಗವಂತನ ಮಕ್ಕಳೆಂಬ ವಿಶಾಲ ದೃಷ್ಟಿ 7. ಪಠ್ಯಪುಸ್ತಕಗಳಲ್ಲಿ ಅರಣ್ಯಾಭಿವೃದ್ಧಿ ಸಂಬಂಧಿತ ಶಿಕ್ಷಣಾ ನೀಡಿಕೆ.

ಇಂದು ಕೊರೋನಾ ಊಹಿಸಲಾಗದ ದುಃಸ್ಥಿತಿಯನ್ನುಂಟು ಮಾಡಿರುವುದು ಸುಸ್ಪಷ್ಟ. ನಾವಿರುವ ಧರೆ ಚನ್ನಾಗಿರಬೇಕು. ಉತ್ತವಿಸಬೇಕು. ಉತ್ತಮ ಫಲಿತಾಂಶಗಳು ಉತ್ತಮ ಕಾರ್ಯಗಳಿಂದ ಮಾತ್ರ ಸಾಧ್ಯವೆಂಬ ಅರಿವು ಮೂಡಬೇಕು. “ಧರ್ಮೋ ರಕ್ಷತಿ ರಕ್ಷಿತ” ಎಂಬ ನಾಣ್ಣುಡಿಯಂತೆ ನಮಗೆ ಜನ್ಮ ನೀಡಿ ಪೋಷಣೆ ಮೂಡಿರುವ ಈ ಪ್ರಕೃತಿ ಮಾತೆಗೆ ಸಂಬಂಧಿಸಿದಂತೆ ಮೇಲ್ಕಂಡಮೂದಿಸಿರುವ ಮನೋ ನಿರ್ಧಾರಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವ ಮೂಲಕ ಉತ್ತಮೋತ್ತಮ ಆರೋಗ್ಯಾಭಿವೃದ್ಧಿ ಕ್ಷೇಮ ಫಲಿತಾಂಶಗಳನ್ನು ನಿರೀಕ್ಷಿಸೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 17,200 ಆಗಿರುತ್ತದೆ. ಇವುಗಳ ಪೈಕಿ 9438 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8076.

**ಮೇ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 336, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 130.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2939 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 305 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,424 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1022 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮೇ ತಿಂಗಳಿನಲ್ಲಿ 40 ಪ್ರಕರಣ ದಾಖಲಾಗಿರುತ್ತವೆ.

## ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ಎನ್ ದೇಶಪಾಂಡೆಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ



**ಗದಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಹಾಗೂ ಮುಳಗುಂದ ಅರ್ಬನ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ನ ನಿರ್ದೇಶಕರಾದ ಶ್ರೀಯುತ ಆರ್. ಎನ್ ದೇಶಪಾಂಡೆ 09ನೇ ಮೇ 2021ರಂದು ವಿಧಿವಶರಾಗಿದ್ದಾರೆ. ಶ್ರೀಯುತರ ನಿಧನಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆ ನಡೆದು ಶ್ರೀಯುತರ ಆತ್ಮಕ್ಕೆ ಶಾಂತಿ ಕೋರಲಾಯಿತು.

## ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

### ಸಂಯುಕ್ತ ಸಹಕಾರಿಯ ಅಧಿಕಾರಿ/ಸಿಬ್ಬಂದಿಯವರಿಗೆ ವ್ಯಕ್ತಿತ್ವ ವಿಕಸನ ಹಾಗು ವೃತ್ತಿ ನೈಪುಣ್ಯತೆಯ ಅರ್ಥಪೂರ್ಣ ತರಬೇತಿ : ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರುಗಳ ಭಾಗವಹಿಸುವಿಕೆ ಹಾಗೂ ಮಾರ್ಗದರ್ಶನ ಸ್ವಾಗತಾರ್ಹ

ರಾಜ್ಯದಲ್ಲಿ ಕೋವಿಡ್-19 ಮಹಾಮಾರಿಯ 2ನೇ ಅಲೆಯ ಹಿನ್ನೆಲೆಯಲ್ಲಿ, ಜನತಾ ಕರ್ಫ್ಯೂ ಹಾಗು ಲಾಕ್‌ಡೌನ್‌ಗಳ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸೇನಾನಿಗಳಾಗಿ ಕಾರ್ಯನಿರ್ವಹಿಸುವ ಸಂಯುಕ್ತ ಸಹಕಾರಿಯ ಅಧಿಕಾರಿ ಹಾಗೂ ಸಿಬ್ಬಂದಿಯ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಮತ್ತು ಅವರನ್ನು ಹೆಚ್ಚು ಜ್ಞಾನವಂತರನ್ನಾಗಿಸುವ ಸದಾವಕಾಶವನ್ನು ಉಪಯೋಗಿಸಿಕೊಂಡು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ವ್ಯಕ್ತಿತ್ವ ವಿಕಸನ ಮತ್ತು ವೃತ್ತಿ ನೈಪುಣ್ಯತೆಯ ತರಬೇತಿಯನ್ನು ದಿನಾಂಕ 17.05.2021 ರಿಂದ 01.06.2021 ರವರೆಗೆ (ಭಾನುವಾರ ಹೊರತುಪಡಿಸಿ) ಪ್ರತಿದಿನ ಮಧ್ಯಾಹ್ನ 3.30 ರಿಂದ 5.30 ರವರೆಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತಜ್ಞರುಗಳಿಂದ ಆನ್‌ಲೈನ್ ನಲ್ಲಿ ತರಬೇತಿಯನ್ನು ವ್ಯವಸ್ಥೆ ಮಾಡಲಾಗಿತ್ತು. ಈ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಪೂರ್ಣಪ್ರಮಾಣದಲ್ಲಿ ಭಾಗವಹಿಸಿ ಪ್ರಯೋಜನ ಪಡೆದರು. ಈ ಕಾರ್ಯಕ್ರಮಗಳಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿಯವರು, ನಿರ್ದೇಶಕರುಗಳಾದ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಪ್ರಸನ್ನಕುಮಾರ, ಶ್ರೀ ಸಂಜೀವ ಮಹಾಜನ, ಶ್ರೀ ಶ್ರೀಧರ, ಶ್ರೀ ಬಿ.ಎಸ್.ಗುಂಡೂರಾವ, ಶ್ರೀಮಂಜುನಾಥ ಇವರುಗಳು ಹಾಗೂ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ನಿವೃತ್ತ ಉಪನಿರ್ದೇಶಕ ಶ್ರೀ ಜಿ.ಕೆ.ರಾಮಪ್ಪ ಇವರುಗಳು ಭಾಗವಹಿಸಿ ಮಾರ್ಗದರ್ಶನ ಮಾಡಿರುವುದು ಸ್ವಾಗತಾರ್ಹ.

#### ತರಬೇತಿಯಲ್ಲಿ ಅಳವಡಿಸಿದ ವಿಷಯಗಳು, ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗು ನಿರ್ದೇಶಕರ ಮಾರ್ಗದರ್ಶನದ ವಿವರಗಳು

**ದಿನಾಂಕ 17-5-2021 ರಂದು** ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವಿಶ್ವನಾಥ ಹಿರೇಮಠರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ, ವಿಷಯಗಳು ನಡುವಳಿಕೆಗಳನ್ನು ದಾಖಲಿಸುವುದು ವಿಷಯವಾಗಿ ಉಪನ್ಯಾಸ ನೀಡಿದರು. ವಿಶೇಷವಾಗಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡುವ ಸಂದರ್ಭಗಳಲ್ಲಿ ಗಮನಿಸಬೇಕಾದ ವಿಷಯಗಳನ್ನು ಮತ್ತು ವಿಶೇಷವಾಗಿ ದಾಖಲಾತಿಗಳನ್ನು ದಾಖಲಿಸುವ ಪ್ರಕ್ರೀಯೆಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿರುವುದು ಅಗತ್ಯ ಎಂದು ತಿಳಿಸಿದರು. ಹಳೆಯ ಕಾಯ್ದೆಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ದಾಖಲಾತಿಗಳ ನಿರ್ವಹಣೆ ಸಮರ್ಪಕವಾಗಿವೆ. ಆದರೆ ಸೌಹಾರ್ದ ಸಹಕಾರಿಗಳಲ್ಲಿ ದಾಖಲಾತಿಗಳ ನಿರ್ವಹಣೆಯಲ್ಲಿ ಪರಿಪಕ್ವತೆ ಕಾಣುತ್ತಿಲ್ಲ ಎಂದು ತಿಳಿಸಿದರು.

**ದಿನಾಂಕ 18-5-2021 ರಂದು** ಶ್ರೀ ಹೆಚ್.ಎಸ್. ನಾಗರಾಜಯ್ಯನವರು ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಇವರು ಸಹಕಾರಿಗಳ ವಿಚಾರಣೆ ನಡೆಸುವ ಪ್ರಕ್ರೀಯೇ ಹಾಗೂ ವರದಿ ಸಿದ್ಧಪಡಿಸುವ ಬಗ್ಗೆ ಉಪನ್ಯಾಸ ನೀಡಿದರು. ಉಪನ್ಯಾಸದ ನಂತರ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಶ್ರೀಯುತ ಹೆಚ್. ನಾಗರಾಜರವರೊಂದಿಗೆ ಸುದೀರ್ಘವಾಗಿ ಚರ್ಚೆಗಳನ್ನು

ನಡೆಸಿ ತಮ್ಮ ಸಂಶಯಗಳನ್ನು ನಿವಾರಿಸಿಕೊಂಡರು.

**ದಿನಾಂಕ 19–5–2021 ರಂದು** ಶ್ರೀ ಸುಬ್ರಮಣ್ಯ ಕುಳೇದ, ಕಾರ್ಪೋರೇಟ್ ಟ್ರೇನರ್, ಇವರು ವರ್ತನೆಯ ವಿಜ್ಞಾನ (ಬಿಹೇವಿಯರಲ್ ಸೈನ್ಸ್) ಬಗ್ಗೆ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಸಿಬ್ಬಂದಿಯವರು ತಮ್ಮ ಮನೆಗಳಲ್ಲಿ, ಕಛೇರಿಗಳಲ್ಲಿ ಸಮಾಜದಲ್ಲಿ ಹೇಗೆ ವರ್ತಗಳು ಪರಿಣಾಮ ಬೀರುತ್ತವೆ. ಆದ್ದರಿಂದ ನಮ್ಮ ವರ್ತನೆಗಳ ಬಗ್ಗೆ ಬಹಳ ಗಮನಹರಿಸುವುದು ಅವಶ್ಯಕ ಎಂದು ತಿಳಿಸಿದರು.

**ದಿನಾಂಕ 20–5–2021 ರಂದು** ಸಹಕಾರ ಲೆಕ್ಕಪರಿಶೋಧನಾ ಇಲಾಖೆ ನಿವೃತ್ತ ಉಪನಿರ್ದೇಶಕರಾದ ಶ್ರೀ ಜಿ.ಕೆ.ರಾಮಪ್ಪನವರು ಸೌಹಾರ್ದ ಸಹಕಾರಿಗಳ ಆರ್ಥಿಕ ತಃಖ್ತೆಗಳ ಅಧ್ಯಯನ ಪರಿಶೀಲನೆ, ವಿಶ್ಲೇಷಣೆ ಮತ್ತು ಆಡಳಿತ ನಿಯಂತ್ರಣ ಮತ್ತು ಅಭಿವೃದ್ಧಿ ಕುರಿತಾದ ಉಪನ್ಯಾಸ ನೀಡಿದರು. ಶ್ರೀಯುತರು ತಮ್ಮ ಸುದೀರ್ಘ ಅನುಭವವನ್ನು ಬಹಳ ಉತ್ತಮವಾದ ಶೈಲಿಯಲ್ಲಿ ಸಿಬ್ಬಂದಿಯವರಿಗೆ ಅರ್ಥವಾಗುವ ಹಾಗೆ ವಿವರಿಸಿದರು.

**ದಿನಾಂಕ 21–5–2021 ರಂದು** ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಶ್ರೀಕಾಂತ ಬರುವೆಯವರು ವಿಶೇಷಾಧಿಕಾರಿಗಳ ಅಧಿಕಾರಗಳು, ಕರ್ತವ್ಯ ಹಾಗೂ ಜವಾಬ್ದಾರಿಗಳು ವಿಷಯವಾಗಿ ಉಪನ್ಯಾಸ ನೀಡಿದರು. ಈ ಉಪನ್ಯಾಸದ ನಂತರವೂ ಸಿಬ್ಬಂದಿಯವರು ವಿಶೇಷ ಅಧಿಕಾರಿಯಾಗಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಉಂಟಾದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಯಿತು.



**ದಿನಾಂಕ 22–5–2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು** ಕೋವಿಡ್–19 ಕಾಲಘಟ್ಟದಲ್ಲಿ ಸಹಕಾರಿಗಳ ಚಟುವಟಿಕೆಗಳು ಮತ್ತು ಕಾರ್ಯನಿರ್ವಹಣೆ ಬಗ್ಗೆ ಮಾತನಾಡುತ್ತ ಸೌಹಾರ್ದ ಸಹಕಾರಿಗಳಿಗೆ ಇದು ಅತ್ಯಂತ ವಿಷಮಕಾಲವಾಗಿದೆ. ಈ ಸಂದರ್ಭದಲ್ಲಿ ಜನರ ಜೀವನ ಶೈಲಿ ಬದಲಾಗಿದೆ ಬದಲಾವಣೆಗೆ ತಕ್ಕಂತೆ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಒಂದು ರೀತಿಯ ಭಯದ ವಾತಾವರಣ ನಿರ್ಮಾಣ ಇದೆ. ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಸಂಯುಕ್ತ ಸಹಕಾರಿಯು ಈಗ ಕಾರ್ಪೋರೇಟ್ ಸಂಸ್ಥೆಯಂತೆ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ವ್ಯವಸ್ಥಾಪನಾಕ್ಕಾಗಿ ಶೇಕಡಾ 10% ವೆಚ್ಚ ಮಾಡಿದರೆ ಅಭಿವೃದ್ಧಿಗಾಗಿ ಶೇಕಡಾ 90% ವೆಚ್ಚ ಮಾಡುವುದು ಅಗತ್ಯವೆನಿಸುತ್ತದೆ. ಸಹಕಾರಿಗಳ ಕಾರ್ಯನಿರ್ವಹಣೆಯ ಸಮಯದಲ್ಲಿ ಬದಲಾವಣೆ ಮಾಡುವುದು ಅಗತ್ಯ. ಸೌಹಾರ್ದ ಸಹಕಾರಿಗಳೊಡನೆ ಸಂಯುಕ್ತ ಸಹಕಾರಿ ಯಾವಾಗಲೂ ಸ್ಪಂದಿಸುತ್ತಲೇ ಬಂದಿದೆ. ನಿರಂತರವಾಗಿ ಸ್ಪಂದಿಸುತ್ತದೆ ಎಂಬುದನ್ನು ಸೌಹಾರ್ದ ಸಹಕಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಸಹಕಾರಿಗಳ ಆರ್ಥಿಕ ವ್ಯವಸ್ಥೆಯನ್ನು ಭದ್ರಪಡಿಸುವುದರತ್ತ ಹೆಚ್ಚು ಗಮನಹರಿಸಬೇಕು. ಅನಗತ್ಯ ಸಾಲ ನೀಡುವುದನ್ನು ನಿಲ್ಲಿಸಬೇಕು. ಈ ಸಂದರ್ಭದಲ್ಲಿ ಠೇವಣಿ ಸಂಗ್ರಹ ಕಡಿಮೆ ಮಾಡಬೇಕು. ಹೆಚ್ಚಿನ ಬಡ್ಡಿಯ ಠೇವಣಿಗಳನ್ನು ಹಿಂತಿರುಗಬೇಕು. ಕಡಿಮೆ ಬಡ್ಡಿಯ ಬಂಡವಾಳಗಳ ಸಂಗ್ರಹದ ಕಡೆಗೆ ಹೆಚ್ಚು ಗಮನ ಹರಿಸುವುದು. ಸಹಕಾರಿಯ ಆದಾಯವನ್ನು ಹೆಚ್ಚಿಸುವಂತಹ ಕಾರ್ಯಚಟುವಟಿಕೆಗಳನ್ನು ಮಾಡುವಂತೆ ಸಲಹೆ ನೀಡುವುದು. ಆರೋಗ್ಯ ವಿಮೆ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸುವುದು.

ಈ ಲಾಕ್‌ಡೌನ್ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳು ಸಾಕಷ್ಟು ತೊಂದರೆಗಳನ್ನು ಅನುಭವಿಸಿವೆ. ಸೌಹಾರ್ದ ಸಹಕಾರಿಗಳನ್ನು ಅರ್ಥವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ಪರಿಗಣಿಸುವಂತೆ ಇವುಗಳ ದಿನ ನಿತ್ಯದ ಕಾರ್ಯಚಟುವಟಿಕೆಗಳಲ್ಲಿ ತೊಂದರೆಯಾಗದಂತೆ ಸರಕಾರದ ಸಹಕಾರ ಇಲಾಖೆ ಅಧಿಕಾರಿಗಳ ಜೊತೆಗೆ ಮತ್ತು ಸಹಕಾರ ಸಚಿವರ ಜೊತೆಗೆ ಮಾತನಾಡಲಾಗಿದೆ. ಸದ್ಯದಲ್ಲಿಯೆ ಸೌಹಾರ್ದ ಸಹಕಾರಿಗಳ ತೊಂದರೆಗಳ ನಿವಾರಣೆಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದೆಂದು ಮಾನ್ಯ ಸಹಕಾರ ಸಚಿವರು ತಿಳಿಸಿದ್ದಾರೆಂದು ತಿಳಿಸಿದರು



**ಶ್ರೀ ವಿಶ್ವನಾಥ ಹಿರೇಮಠ :** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಹಿರೇಮಠ ರವರು ಮಾತನಾಡಿ ಸೌಹಾರ್ದ ಸಹಕಾರಿಗಳು ಆರ್ಥಿಕ ಭದ್ರತೆಯತ್ತ ಹೆಚ್ಚು ಗಮನಹರಿಸುವುದೆಂದು ತಿಳಿಸಿದರು.



**ಶ್ರೀ ಜಿ. ಎನ್. ಪಾಟೀಲ್ :** ಇವರು ಮಾತನಾಡಿ ಈ ಲಾಕ್ ಡೌನ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಅನೇಕ ತೊಂದರೆಗಳನ್ನು ಎದುರಿಸುತ್ತಿವೆ. ವಿಶೇಷವಾಗಿ ನಾವು ಸೌಹಾರ್ದ ಸಹಕಾರಿಗಳು ಸದಸ್ಯರ ಆರ್ಥಿಕ ಸಂಕಷ್ಟದಲ್ಲಿ ನೆರವಾಗಲು ಸಾಧ್ಯವಾಗುತ್ತಿಲ್ಲ. ಸರಕಾರದ ಹಂತದಲ್ಲಿ ಸಹಕಾರಿಗಳು ದೈನಂದಿನ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಸರಕಾರ ಹಂತದಲ್ಲಿ ಪ್ರಯತ್ನಿಸುವುದು ಅಗತ್ಯ ಎಂದರು.



**ಶ್ರೀ ಪ್ರಸನ್ನಕುಮಾರ :** ಕಾಲಘಟ್ಟ ಎಲ್ಲಿಂದಲ್ಲಿಗೆ ಎಂದು ತಿಳಿಯುವುದು ಬಹಳ ಕಷ್ಟವಾಗಿದೆ. ಲಾಕ್ ಡೌನ್ ಸಂದರ್ಭದಲ್ಲಿ ಏನು ಮಾಡಬೇಕು. ಲಾಕ್‌ಡೌನ್ ಇಲ್ಲದ ಸಮಯದಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಸರಿಯಾಗಿ ಚಿಂತನೆ ಮಾಡುವುದು ಅಗತ್ಯ.

ಸದಸ್ಯ ಸಹಕಾರಿಗಳ ಹಿತವನ್ನು ಕಾಪಾಡುವ ಜವಾಬ್ದಾರಿ ಇದೆ ಉತ್ತಮ ಆಲೋಚನೆಗಳನ್ನು ತಿಳಿಯಪಡಿಸಬೇಕು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹಕಾರಿಗಳ ಗೆಳೆಯರಾಗಿ, ತತ್ವಜ್ಞಾನಿಯಾಗಿ ಮಾರ್ಗದರ್ಶಿಯಾಗಿ ಕೆಲಸ ನಿರ್ವಹಿಸಬೇಕು.



**ಶ್ರೀ ಸಂಜೀವ ಮಹಾಜನ :** ಇವರು ಮಾತನಾಡಿ ಕೋವಿಡ್-19 ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಮೇಲೆ ಬಹಳಷ್ಟು ಪರಿಣಾಮ ಬೀರಿದೆ. ಸಾಲಗಳ ವಾಪಸಾತಿ ಆಗುತ್ತಾ ಇಲ್ಲ ಸಿಬ್ಬಂದಿಯವರ ಸಂಬಳ ಕೊಡುವುದಕ್ಕೂ ಕಷ್ಟವಾಗ್ತಾ ಇದೆ. ಸಂಸ್ಥೆಗಳು ನಷ್ಟದ ಹಾದಿಯಲ್ಲಿ ಸಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡುವುದು ಅವಶ್ಯಕ ಎಂದರು. ಖರ್ಚುವೆಚ್ಚಗಳ ನಿಯಂತ್ರಣ, ಹೊಸ ಯೋಜನೆಗಳ ಮುಂದೂಡುವಿಕೆ ಅಲ್ಪ ಅವಧಿಯ ಸಾಲ ದೀರ್ಘಾವಧಿಯ ಠೇವಣಿಗಳನ್ನು ಸಂಗ್ರಹಿಸುವ ಕ್ರಮ ಕಡಿಮೆ ಸಿಬ್ಬಂದಿಯ ಸೇವೆಯಿಂದ ಕಾರ್ಯನಿರ್ವಹಿಸುವ ಕ್ರಮಗಳನ್ನು ಜಾರಿ ಮಾಡುವುದು ಉತ್ತಮ ಎಂದು ತಿಳಿಸಿದರು.



**ಶ್ರೀ ಶ್ರೀಧರ :** ಇವರು ಗಿಡಗಳನ್ನು ಕಡಿಯುವಾಗ ಕೊಡಲಿಯನ್ನು ಚೂಪು ಮಾಡಿಕೊಂಡು ಗಿಡ ಕಡಿದಾಗ ಹೆಚ್ಚು ಕೆಲಸನಿರ್ವಹಿಸಲು ಸಾಧ್ಯವಾಗುತ್ತದೆ ಎಂಬ ಒಂದು ಕಥೆಯ ಮೂಲಕ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ತರಬೇತಿ ನೀಡುವುದರ ಮೂಲಕ ಅವರ ದಕ್ಷತೆಯನ್ನು ಹೆಚ್ಚಿಸುವ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದು ತಿಳಿಸಿದರು.

**ಶ್ರೀ ಬಿ.ವಿ .ರವೀಂದ್ರನಾಥ, ಚಾರ್ಟರ್ಡ್ ಅಕೌಂಟೆಂಟ್,** ಇವರು ಮಾತನಾಡಿ ಕೋವಿಡ್ ಭಿತಿಯಿಂದ ಸತ್ತವರ ಸಂಖ್ಯೆ ಜಾಸ್ತಿ ಎಂದು ತಿಳಿಸಿ ಇದು ನಮಗೆ ಉತ್ತಮ ಪಾಠವನ್ನು ಕಲಿಸಿದೆ. ಸ್ವಾತಂತ್ರ ಸಂಗ್ರಾಮದ ಒಂದು ವಿಷಯವಾಗಿರುವ ಜಾಲಿಯನ್ ವಾಲಾಬಾಗ್ ದುರಂತದಲ್ಲಿ ಬ್ರಿಟಿಷ್‌ರ ಗುಂಡಿಗೆ ಬಲಿಯಾದವ-ರಿಗಿಂತ ಹೆದರಿ ಪ್ರಾಣ ಕಳೆದುಕೊಂಡವರೆ ಜಾಸ್ತಿ ಎಂದು ತಿಳಿಸಿ ಈಗಲೂ ಹಾಗೆ ಆಗಿದೆ. ಸೌಹಾರ್ದ ಸಹಕಾರಿಗಳು ನಾವು ಜನರಲ್ಲಿ ಧೈರ್ಯ ತುಂಬುವ ಕೆಲಸವನ್ನು ಮಾಡಬೇಕಾಗಿದೆ ಎಂದು ತಿಳಿಸಿದರು.

**ಶ್ರೀ ವೀರೇಶ ಹಿರೇಮಠ :** ಭ್ರಮರಾಂಬ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾದಿಕಾರಿ ಶ್ರೀ ವೀರೇಶ ಹಿರೇಮಠರವರು ಮಾತನಾಡಿ ಈ ಮಹಾಮಾರಿಯಿಂದಾಗಿ ಜನರ ಜೀವನ ಬೆಲೆ ತಿಳಿದಂತಾಗಿದೆ. ಸದಸ್ಯರ ಆರ್ಥಿಕ ಅವಶ್ಯಕತೆಗಳಿಗೆ ತುರ್ತಾಗಿ ಸ್ಪಂದಿಸುವ ಕಾರ್ಯಕ್ರಮಗಳನ್ನು ಸೌಹಾರ್ದ ಸಹಕಾರಿಗಳು ಹಮ್ಮಿಕೊಳ್ಳಬೇಕಾಗಿದೆ. ಸಹಕಾರಿ ತತ್ವವಾದ ಸಾಮಾಜಿಕ ಕಳಕಳಿ ಸಹಕಾರ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸೋಣ ಎಂದು ತಿಳಿಸಿದರು.



**ಶ್ರೀ ಶರಣಗೌಡ ಜಿ. ಪಾಟೀಲ :** ವ್ಯವಸ್ಥಾಪಕ ನಿರ್ದೇಶಕರು ಇದುವರೆಗೆ ಮಾತನಾಡಿದ ನಿರ್ದೇಶಕರು ಹಾಗೂ ಸಹಕಾರಿಗಳು ಉತ್ತಮವಾದ ಸಲಹೆಗಳನ್ನು ಹಾಗೂ ಕ್ರಿಯಾ ಯೋಜನೆಗಳನ್ನು ವಿವರಿಸಿದ್ದಾರೆ. ಸಂಯುಕ್ತ ಸಹಕಾರಿ ಅಧಿಕಾರಿಗಳು ಇವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುರು ಎಂದು ತಿಳಿಸಿದರು.

**ದಿನಾಂಕ 24-5-2021 ರಂದು** ಭ್ರಮರಾಂಭ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಶ್ರೀ ವೀರೇಶ ಹಿರೇಮಠ ಇವರು ತಮ್ಮ ಸೌಹಾರ್ದ ಸಹಕಾರಿಯಲ್ಲಿ ನೀಡುತ್ತಿರುವ ವಿವಿಧ ರೀತಿಯ ಸಾಲಗಳನ್ನೇ ವಿವರಿಸಿ ಈ ಸಾಲಗಳಿಗೆಲ್ಲ ದಾಖಲಾತಿಗಳು ಮತ್ತು ಮುಂಜಾರೂಕತಾ ಕ್ರಮಗಳನ್ನು ವಿವರಿಸಿ ತಮಗೆಲ್ಲ ಇದೊಂದು ಅಧ್ಯಯನವಾಗಿ ಉದಾಹರಣೆಯಾಗಿ ತೆಗೆದುಕೊಳ್ಳಿ ಎಂದು ತಿಳಿಸಿದರು.

**ದಿನಾಂಕ 25-6-2021 ರಂದು** ಚಾರ್ಟರ್ಡ ಅಕೌಂಟಂಟ ಶ್ರೀ ಬಿ.ವಿ.ರವೀಂದ್ರನಾಥ ಇವರು ಆದಾಯ ತೆರಿಗೆ, ಜಿ ಎಸ್ ಟಿ ಮತ್ತು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳ ಬಗ್ಗೆ ವಿವರಿಸಿದರು.



**ದಿನಾಂಕ 26-5-2021 ರಂದು** ಬಡ್ಡಿಯೇತರ ಆದಾಯಗಳ ಬಗ್ಗೆ ಸಂಯುಕ್ತ ಸಹಕಾರಿಯ ನಿರ್ದೇಶಕರು ಮತ್ತು ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷರೂ ಆದ ಶ್ರೀ **ಬಿ.ಎಸ್. ಗುಂಡೂರಾವರವರು,** ಪಾವಗಡ ಸೌಹಾರ್ದ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿರುವ ಶ್ರೀ ಬಿ.ಹೆಚ್. ದಯಾಕರರೆಡ್ಡಿಯವರು ಮತ್ತು ಸೇಂಟ್ ಮಿಲಾಗ್ರೇಸ್ ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾರ್ಜ ಫರ್ನಾಂಡಿಸ್ ರವರುಗಳು ಅವರುಗಳ ಸಹಕಾರಿಗಳಲ್ಲಿ ನಿರ್ವಹಿಸುತ್ತಿರುವ ಬಡ್ಡಿಯೇತರ ಆದಾಯಗಳ ಬಗ್ಗೆ ವಿವರಿಸಿದರು.

**ದಿನಾಂಕ 27-5-2021 ರಂದು** ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆ ಯವರು ಸಹಕಾರಿಗಳ ಸಮಾಪನೆ ವಿಷಯದ ಬಗ್ಗೆ ವಿವರ ನೀಡಿದರು.

**ದಿನಾಂಕ 28-5-2021 ರಂದು** ಸಹಕಾರ ಸಂಘಗಳ ನಿವೃತ್ತ ಅಪರ

ನಿಬಂಧಕರೂ ಮತ್ತು ಸೌಹಾರ್ದ ಸಹಕಾರ ಕಾಯ್ದೆಯ ರಚನೆಯಲ್ಲಿ ಮಹತ್ವದ ಭೂಮಿಕೆಯನ್ನು ನಿರ್ವಹಿಸಿದ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸೌಹಾರ್ದ ಸಂಯುಕ್ತ ಸಹಕಾರಿಯ ರಚನೆ, ಆಶಯ ಮತ್ತು ಕಾರ್ಯನಿರ್ವಹಣೆಯಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಹಾಗೂ ಸಂಯೋಜಕರ ಪಾತ್ರವನ್ನು ವಿವರಿಸಿದರು

**ದಿನಾಂಕ 29–5–2021 ರಂದು** ಸಹಕಾರ ಸಂಘಗಳ ಸಹಾಯಕ ನಿಬಂಧಕ ಶ್ರೀ ಎಮ್.ಪಿ. ಮಂಜುನಾಥರವರು ಸಹಕಾರಿಗಳ ಚುನಾವಣೆಯ ಪ್ರಕ್ರೀಯೆಯ ಬಗ್ಗೆ ವಿವರಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಗಳ ಚುನಾವಣೆ ಸಂದರ್ಭದಲ್ಲಿ ವಿವಿಧ ಜಿಲ್ಲೆಗಳಲ್ಲಿ ಅಧಿಕಾರಿಗಳು ತಮ್ಮದೇ ಆದ ವ್ಯಾಖ್ಯಾನಗಳನ್ನು ಆದರಿಸಿ ಕಾರ್ಯಾಚರಣೆಗಳನ್ನು ಮಾಡುತ್ತಾರೆ. ಇದರಿಂದ ಚುನಾವಣೆಗಳನ್ನು ಜರುಗಿಸುವಾಗ ತೊಂದರೆಗಳು ಉಂಟಾಗುತ್ತಿವೆ ಎಂಬ ಅಭಿಪ್ರಾಯದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಇಂತಹ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಚುನಾವಣೆಗಳ ನಡೆಸುವಂತೆ ಏಕರೂಪ ನೀತಿಗಳನ್ನು ಎಲ್ಲ ಕಡೆಗಳಲ್ಲಿ ಅನುಸರಿಸುವ ಹಾಗೆ ಸುತ್ತೋಲೆ ಹೊರಡಿಸುವ ಮೂಲಕ ಕ್ರಮವಿಡುವ ಬಗ್ಗೆ ಚಿಂತನೆ ನಡೆಯಿತು.

**ದಿನಾಂಕ 30–5–2021 ರಂದು** ಅನುಭವಿ ಸಹಕಾರಿ ತಜ್ಞ, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆಯವರು ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯ ಬಗ್ಗೆ ವಿವರವಾದ ಉಪನ್ಯಾಸ ನೀಡುತ್ತ ಸೌಹಾರ್ದ ಸಹಕಾರಿಗಳಲ್ಲಿ ಇದು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಸಂಯೋಜಕರು ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

**ದಿನಾಂಕ 01–6–2021 ರಂದು** ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿ ಶ್ರೀ ಪಾಲರಾಜರವರು ಸೌಹಾರ್ದ ಸಹಕಾರಿಗಳಲ್ಲಿ ದಾಖಲಾತಿಗಳ ನಿರ್ವಹಣೆ, ದಾಖಲಾತಿಗಳ ಸಂರಕ್ಷಣೆ, ವಿಲೇವಾರಿ ಮತ್ತು ಕಡತಗಳ ವರ್ಗೀಕರಣದ ಬಗ್ಗೆ ವಿವರ ನೀಡಿದರು. ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆದು ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ಮಾತನಾಡಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ದಾಖಲಾತಿಗಳ ನಿರ್ವಹಣೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಆದಾಗ್ಯೂ ಈ ಬಗ್ಗೆ ವಿವರವಾದ ಸುತ್ತೋಲೆ ಹೊರಡಿಸುವ ಅಗತ್ಯ ವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಒಟ್ಟಾರೆ 14 ದಿನಗಳ ಈ ತರಬೇತಿ ಪ್ರಯೋಜನಕಾರಿಯಾಗಿತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಪೂರಕವಾಗಿತ್ತು ಈ ತರಬೇತಿಯನ್ನು ಸಂಘಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿಯವರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

**ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಾಚರಣೆಯ ಬಗ್ಗೆ ದಶಕದ ಚಿಂತನೆ 2021-31 ಕುರಿತಂತೆ ಪ್ರಬಂಧ :**

ಸೌಹಾರ್ದ ಸಹಕಾರಿ ಕ್ಷೇತ್ರದ ಮತ್ತು ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಬಗ್ಗೆ ದಶಕದ ಚಿಂತನೆ 2021–31 ಕುರಿತು 2 ಪುಟಗಳ ಪ್ರಬಂಧವನ್ನು ಬರೆದುಕೊಡುವಂತೆ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಗಳಿಗೆ ಸೂಚಿಸಲಾಯಿತು.

## ರಾಜ್ಯದ ಪ್ರಮುಖ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮದ ವಿವರಗಳು

| ಕ್ರ.ಸಂ | ದಿನಾಂಕ | ವಿಷಯ | ಉಪನ್ಯಾಸಕರು | ಸಮಯ |
|---|---|---|---|---|
| 1 | 02.06.2021 | ಮಾನವೀಯ ಸಂಪನ್ಮೂಲಗಳ ನಿರ್ವಹಣೆ (ಹೆಚ್ಆರ್ಎಂ) | ಡಾ. ನಂದೀಶ ವಿ ಹಿರೇಮಠ, ಮಾನ್ಯ ಕಾರ್ಪೋರೇಟ್ ಟ್ರೇನರ್, ಬೆಂಗಳೂರು | ಪ್ರತಿ ದಿನ ಮಧ್ಯಾಹ್ನ 03.30ರಿಂದ 05.30ರ ವರೆಗೆ |
| 2 | 03.06.2021 | ಗ್ರಾಹಕ ಸಂಬಂಧಗಳ ನಿರ್ವಹಣೆ (ಸಿಆರ್ಎಂ) | | |
| 3 | 04.06.2021 | ವ್ಯಾಪರ ಅಭಿವೃದ್ಧಿ ನಿರ್ವಹಣೆ (ಬಿಡಿಪಿ) | | |
| 4 | 05.06.2021 | ಗುಂಪುಗಳ ರಚನೆಯ ನಿರ್ವಹಣೆ ಹಾಗೂ ಪರಿಣಾಮಕಾರಿ ಸಂವಹನ (ಟೀಂ ಬಿಲ್ಡಿಂಗ್ ಅಂಡ್ ಕಮ್ಯುನಿಕೇಶನ್) | | |

## ರಾಜ್ಯದ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಮಾಲೋಚನಾ ಸಭೆಗಳ ವಿವರಗಳು

| ವಿಭಾಗ | ಕ್ರ. ಸಂ. | ಜಿಲ್ಲೆ | ದಿನಾಂಕ | ಅವಧಿ | ಗೋಟು ಮೀಟಿಂಗ್ ಐಡಿ |
|---|---|---|---|---|---|
| ಬೆಳಗಾವಿ ವಿಭಾಗ | 1 | ಗದಗ, ಉತ್ತರ ಕನ್ನಡ | 01.06.2021 | ಬೆಳಿಗ್ಗೆ 11.00 ಗಂಟೆಗೆ | 301–361–605 |
| | 2 | ಧಾರವಾಡ, ಹಾವೇರಿ | 01.06.2021 | ಮಧ್ಯಾಹ್ನ 03.30 ಗಂಟೆಗೆ | 652–885–845 |
| | 3 | ವಿಜಯಪುರ | 02.06.2021 | ಬೆಳಿಗ್ಗೆ 11.00 ಗಂಟೆಗೆ | 901–698–133 |
| | 4 | ಚಿಕ್ಕೋಡಿ, ಗೋಕಾಕ, ನಿಪ್ಪಾಣಿ | 03.06.2021 | ಬೆಳಿಗ್ಗೆ 11.00 ಗಂಟೆಗೆ | 969–662–797 |
| | 5 | ಬಾಗಲಕೋಟೆ | 03.06.2021 | ಮಧ್ಯಾಹ್ನ 03.30 ಗಂಟೆಗೆ | 511–576–501 |
| ಕಲಬುರಗಿ ವಿಭಾಗ | 6 | ಕಲಬುರಗಿ, ಬೀದರ, ಯಾದಗಿರಿ | 04.06.2021 | ಬೆಳಿಗ್ಗೆ 11.00 ಗಂಟೆಗೆ | 982–670–469 |
| | 7 | ಕೊಪ್ಪಳ | 04.06.2021 | ಮಧ್ಯಾಹ್ನ 03.30 ಗಂಟೆಗೆ | 328–215–989 |
| | 8 | ಬಳ್ಳಾರಿ, ವಿಜಯನಗರ | 05.06.2021 | ಬೆಳಿಗ್ಗೆ 11.00 ಗಂಟೆಗೆ | 697–024–453 |
| | 9 | ರಾಯಚೂರು | 05.06.2021 | ಮಧ್ಯಾಹ್ನ 03.30 ಗಂಟೆಗೆ | 913–437–685 |
| ಮೈಸೂರು ವಿಭಾಗ | 10 | ಉಡುಪಿ, ಹಾಸನ | 07.06.2021 | ಬೆಳಿಗ್ಗೆ 11.00 ಗಂಟೆಗೆ | 630–301–261 |
| | 11 | ಮಂಗಳೂರು, ಚಿಕ್ಕಮಂಗಳೂರು | 07.06.2021 | ಮಧ್ಯಾಹ್ನ 03.30 ಗಂಟೆಗೆ | 242–886–053 |
| | 12 | ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು | 08.06.2021 | ಬೆಳಿಗ್ಗೆ 11.00 ಗಂಟೆಗೆ | 407–617–613 |
| ಬೆಂಗಳೂರು ವಿಭಾಗ | 13 | ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ | 09.06.2021 | ಬೆಳಿಗ್ಗೆ 11.00 ಗಂಟೆಗೆ | 125–004–317 |
| | 14 | ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ | 10.06.2021 | ಬೆಳಿಗ್ಗೆ 11.00 ಗಂಟೆಗೆ | 953–808–597 |
| | 15 | ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ | 11.06.2021 | ಬೆಳಿಗ್ಗೆ 11.00 ಗಂಟೆಗೆ | 341–132–677 |



## ಶ್ರೀ ಎಸ್. ಆರ್. ರಂಗಮೂರ್ತಿ ಇವರಿಗೆ "ಇಫ್ಕೋ ಸಹಕಾರಿತಾ ಬಂಧು" ಪ್ರಶಸ್ತಿ ಪ್ರಧಾನ

**ಮಂಗಳೂರು :** ಹಿರಿಯ ಸಹಕಾರಿಗಳು, ಮಾಜಿ ಕ್ಯಾಂಪ್ಕೋ ಅಧ್ಯಕ್ಷರಾದ ಹಾಗೂ ಎಸ್. ಆರ್ ಸತೀಶ್ಚಂದ್ರ ಇವರ ಸಹೋದರರಾದ ಶ್ರೀ ಎಸ್.ಆರ್ ರಂಗಮೂರ್ತಿ ಇವರಿಗೆ ಇಫ್ಕೋ ಸಹಕಾರಿ ಸಂಸ್ಥೆಯು ರಾಷ್ಟ್ರ ಮಟ್ಟದಲ್ಲಿ ಕೊಡ ಮಾಡುವ ಪ್ರತಿಷ್ಠಿತ "ಇಫ್ಕೋ ಸಹಕಾರಿತಾ ಬಂಧು ಪ್ರಶಸ್ತಿ" ಲಭಿಸಿದೆ.

## ಸಂಯುಕ್ತ ಸಹಕಾರಿ ಸಿಬ್ಬಂದಿಗಳಿಗೆ / ಅಧಿಕಾರಿಗಳಿಗೆ ವ್ಯಕ್ತಿತ್ವ ವಿಕಸನ ಮತ್ತು ವೃತ್ತಿ ನೈಪುಣ್ಯತೆ ಆನ್‌ಲೈನ್ ತರಬೇತಿ ಕಾರ್ಯಕ್ರಮದ ವಿವರಗಳು

| ಕ್ರ ಸಂ | ದಿನಾಂಕ | ವಿಷಯಗಳು | ಸಂಪನ್ಮೂಲ ವ್ಯಕ್ತಿಗಳು | ಗೋಟು ಮೀಟಿಂಗ್ ಐಡಿ |
|---|---|---|---|---|
| 1 | 17.05.2021 | ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ/ವಿಷಯಗಳು/ನಡುವಳಿ ದಾಖಲಿಸುವ ಬಗ್ಗೆ. | **ಶ್ರೀ ವಿಶ್ವನಾಥ ಚ. ಹಿರೇಮಠ,** ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು | 563517389 |
| 2 | 18.05.2021 | ಸಹಕಾರಿಗಳ ವಿಚಾರಣೆ ನಡೆಸುವ ಪ್ರಕ್ರಿಯೆ ಹಾಗೂ ವರದಿ ಸಿದ್ಧಪಡಿಸುವ ಬಗ್ಗೆ | **ಶ್ರೀ ಹೆಚ್. ಎಸ್ ನಾಗರಾಜಯ್ಯ,** ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಬೆಂಗಳೂರು. | 182491533 |
| 3 | 19.05.2021 | ವರ್ತನೆಯ ವಿಜ್ಞಾನ (Behavioural science) ಕುರಿತು. | **ಶ್ರೀ ಸುಬ್ರಮಣ್ಯ ಕುಳೇದ್** ಕಾರ್ಪೋರೇಟ್ ಟ್ರೇನರ್, ಬೆಂಗಳೂರು. | 132714573 |
| 4 | 20.05.2021 | ಸೌಹಾರ್ದ ಸಹಕಾರಿಗಳ ಆರ್ಥಿಕ ತಃಖ್ತೆಗಳ ಅಧ್ಯಯನ – ಪರಿಶೀಲನೆ – ವಿಶ್ಲೇಷಣೆ. (ಆಡಳಿತಾತ್ಮಕ ನಿಯಂತ್ರಣ ಮತ್ತು ಅಭಿವೃದ್ಧಿ) | **ಶ್ರೀ ರಾಮಪ್ಪ,** ಉಪನಿರ್ದೇಶಕರು (ನಿವೃತ್ತ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ. | 531221461 |
| 5 | 21.05.2021 | ವಿಶೇಷಾಧಿಕಾರಿಯ ಅಧಿಕಾರ, ಜವಾಬ್ದಾರಿಗಳು ಹಾಗೂ ಕರ್ತವ್ಯಗಳು | **ಶ್ರೀ ಶ್ರೀಕಾಂತ ಬರುವೆ,** ಉಪಪ್ರಧಾನ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಳಗಾವಿ. | 883035093 |
| 6 | 22.05.2021 | ಕೋವಿಡ್–19 ಕಾಲಘಟ್ಟದಲ್ಲಿ ಸಹಕಾರಿಗಳ ಚಟುವಟಿಕೆಗಳು ಮತ್ತು ಕಾರ್ಯನಿರ್ವಹಣೆ | **ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು. | 503018261 |
| 7 | 24.05.2021 | ವಿವಿಧ ರೀತಿಯ ಸಾಲಗಳು, ಸಾಲ ನೀಡುವಾಗ ತೆಗೆದುಕೊಳ್ಳಬೇಕಾದ ದಾಖಲಾತಿಗಳು ಹಾಗೂ ಮುಂಜಾಗ್ರತೆ ಕ್ರಮಗಳು. | **ಶ್ರೀ ವಿರೇಶ್ ಮಸ್ಕಿ,** ಮುಖ್ಯಕಾರ್ಯನಿರ್ವಾಕರು, ಭ್ರಮರಾಂಬ ಸೌಹಾರ್ದ ಸಹಕಾರಿ ನಿ., | 205750733 |
| 8 | 25.05.2021 | ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ ಮತ್ತು ಸಹಕಾರಿಗಳಿಗೆ ಅನ್ವಯಿಸುವ ಇತರೆ ಕಾಯ್ದೆಗಳು. | **ಶ್ರೀ ಬಿ.ವಿ ರವೀಂದ್ರ ನಾಥ್.** ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ. | 235340845 |
| 9 | 26.05.2021 | ಸೌಹಾರ್ದ ಸಹಕಾರಿಗಳ ಕೈಗೊಳ್ಳಬಹುದಾದ ಬಡ್ಡಿಯೇತರ ಚಟುವಟಿಕೆಗಳು. | **ಶ್ರೀ ವಸಂತ,** ಮುಖ್ಯಕಾರ್ಯನಿರ್ವಾಹಕರು, ಶ್ರೀ ಸರಸ್ವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಪುತ್ತೂರು | 515084501 |
| 10 | 27.05.2021 | ಸೌಹಾರ್ದ ಸಹಕಾರಿಗಳ ಸಮಾಪನೆಯ ಪ್ರಕ್ರಿಯೆ ಹಾಗೂ ಕಾರ್ಯವಿಧಾನ | **ಶ್ರೀ ನಾರಾಯಣ ಹೆಗಡೆ,** ಉಪಪ್ರಧಾನ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಂಗಳೂರು. | 175786437 |
| 11 | 28.05.2021 | ಸಂಯುಕ್ತ ಸಹಕಾರಿಯ ರಚನೆ – ಆಶಯ ಮತ್ತು ಪ್ರಕಾರ್ಯಗಳ ಕಾರ್ಯನಿರ್ವಹಣೆಯಲ್ಲಿ ಸಿಬ್ಬಂದಿಗಳ ಪಾತ್ರ | **ಶ್ರೀ ಸಿ ಎನ್. ಪರಶಿವಮೂರ್ತಿ,** ಅಪರ ನಿಬಂಧಕರು (ನಿವೃತ್ತ) | 509207997 |
| 12 | 29.05.2021 | ದಾಖಲಾತಿಗಳ ಸಂರಕ್ಷಣೆ ಹಾಗೂ ವಿಲೇವಾರಿ ಮತ್ತು ಕಡತಗಳ ವರ್ಗೀಕರಣ | **ಶ್ರೀ ಪಾಲರಾಜ್,** ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಂಗಳೂರು. | 881544333 |
| 13 | 31.05.2021 | ಮಾನವ ಸಂಪನ್ಮೂಲ ಅಭಿವೃದ್ಧಿ (HRD) & ಜಿಲ್ಲಾ ಸಂಯೋಜಕರು ಮತ್ತು ಸದಸ್ಯ ಸಹಕಾರಿಗಳ ನಡುವಿನ ಸಂಬಂಧ ನಿರ್ವಹಣೆ | **ಶ್ರೀ ಭಾಸ್ಕರ್ ಹೆಗಡೆ ಕಾಗೇರಿ,** ಮಾಜಿ ಉಪಾಧ್ಯಕ್ಷರು ಕೆ.ಡಿ.ಸಿ.ಸಿ ಬ್ಯಾಂಕ್ ಹಾಗೂ ಸಹಕಾರಿ ಶಿಕ್ಷಣ ತಜ್ಞರು | 943525901 |
| 14 | 01.06.2021 | ಸಹಕಾರಿಗಳ ಚುನಾವಣೆ ಪೂರ್ವ ತಯಾರಿ ಕಾರ್ಯಗಳು– ಮುಖ್ಯ ಕಾರ್ಯನಿರ್ವಾಹಕರ ಹಾಗೂ ರಿಟನಿಂಗ್ ಅಧಿಕಾರಿಗಳ ಜವಾಬ್ದಾರಿಗಳು & ಕರ್ತವ್ಯಗಳು. | **ಶ್ರೀ ಎಮ್ ಪಿ ಮಂಜುನಾಥ್** ಸಹಾಯಕ ನಿಬಂಧಕರು, ಸಹಕಾರ ಇಲಾಖೆ. | 593783029 |

**ಸಮಯ :** ಪ್ರತಿ ದಿನ ಮಧ್ಯಾಹ್ನ 3.30 ರಿಂದ 5.30ರ ವರೆಗೆ

# ಕೊರೋನಾ ಲಾಕ್‌ಡೌನ್ ಹಿನ್ನಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಹಾಯ ಹಸ್ತ

## ಪಾವಗಡ ಸೌಹಾರ್ದ ಸಹಕಾರಿಯಿಂದ 150 ಬಡ ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ



**ಪಾವಗಡ** : ಕೊರೋನಾ ಲಾಕ್‌ಡೌನ್ ಹಿನ್ನೆಲೆ ತಾಲ್ಲೂಕಿನ ಬೂದಿಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಎತ್ತಿನಹಳ್ಳಿ ಗ್ರಾಮದಲ್ಲಿ ಶ್ರೀಮತಿ ನಾರಮ್ಮ ಹೆಂಜಾರೆಡ್ಡಿ ಚಾರಿಟಬಲ್ ಟ್ರಸ್ಟ್ ಬೆಳ್ಳಿಬೆಟ್ಟು ಹಾಗೂ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿಮಿಟೆಡ್ ಇವರ ಸಂಯುಕ್ತಾಶ್ರಯದಲ್ಲಿ ಸುಮಾರು 150 ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡರಾದ ಶ್ರೀ ಪ್ರಸಾದ್ ರೆಡ್ಡಿ ಮಾತನಾಡಿ, ಕೊರೋನಾ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರ ಲಾಕ್ ಡೌನ್ ಜಾರಿ ಮಾಡಿರುವ ಹಿನ್ನೆಲೆ ಗ್ರಾಮದ ಜನತೆಗೆ ಆರ್ಥಿಕವಾಗಿ ಹಾಗೂ ವ್ಯವಹಾರಿಕವಾಗಿ ಸಮಸ್ಯೆ ಉಂಟಾಗಿರುವುದರಿಂದ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ, ಆಪರೇಟಿವ್ ಲಿಮಿಟೆಡ್ ನ ಎಲ್ಲಾ ನಿರ್ದೇಶಕರು ಈ ತೀರ್ಮಾನ ಕೈಗೊಳ್ಳುವ ಮೂಲಕ ಗ್ರಾಮದ ಸುಮಾರು 150 ಕುಟುಂಬಗಳಿಗೆ ದಿನಸಿ ಕಿಟ್ ನೀಡಲು ಮುಂದಾಗಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ನಂತರ ಬ್ಯಾಂಕ್ ನ ಸಿಇಓ ವೇಣು ಗೋಪಾಲ್ ರೆಡ್ಡಿ ಮಾತನಾಡಿ ಬ್ಯಾಂಕಿನ ಏಳಿಗೆಯಲ್ಲಿ ಬಡವರು, ಶ್ರೀಮಂತರು ಎಲ್ಲರೂ ನೆರವಾಗಿದ್ದಾರೆ. ಇದೀಗ ಕೊರೋನಾ ಸಂಕಷ್ಟದ ಸಮಯದಲ್ಲಿ ಅಂತಹ ಬಡವರಿಗೆ ನೆರವಾಗಲು ಬ್ಯಾಂಕಿನಿಂದ ದಿನಸಿ ಕಿಟ್ ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕ್ ನ ನಿರ್ದೇಶಕರಾದ ಪಿ. ನರಸಿಂಹ ರೆಡ್ಡಿ, ಟಿ.ಎಸ್, ತಿಮ್ಮಾರೆಡ್ಡಿ, ಟಿ.ಎಸ್ ನರಸಿಂಹ ರೆಡ್ಡಿ, ಯುವ ಮುಖಂಡರಾದ ವೈ.ಟಿ ಭರತ್, ಕೆ.ನರಸಿಂಹ ರೆಡ್ಡಿ, ಸನತ್ ರೆಡ್ಡಿ, ಮನೋಜ್ ಪ್ರಭಾಕರ್, ರಮೇಶ್, ರಾಮು, ಮಂಜುನಾಥ್ ಮತ್ತಿತರರು ಹಾಜರಿದ್ದರು.

## ಬೆಳಗಾವಿ ಜಿಲ್ಲೆಯ 870 ಸೌಹಾರ್ದ ಸಹಕಾರಿಗಳ 4707 ಕಡು ಬಡವ ಸಿಬ್ಬಂದಿಗಳಿಗೆ ಕಿಟ್ ವಿತರಣೆ



**ಚಿಕ್ಕೋಡಿ** : ಬೆಳಗಾವಿ ಜಿಲ್ಲೆ ಸಹಕಾರಿ ಕ್ಷೇತ್ರದಲ್ಲಿ ತನ್ನದೆ ಆದ ಕೊಡುಗೆ ನೀಡಿದೆ. ಕಳೆದ ಎರಡು ವರ್ಷದಿಂದ ಹೆಮ್ಮಾರಿ ಕೊರೋನಾದಿಂದ ಸೌಹಾರ್ದ ಸಹಕಾರಿ ಸಂಸ್ಥೆಗಳು ಹಾಗೂ ಸಿಬ್ಬಂದಿ ಸಂಕಷ್ಟದಲ್ಲಿದ್ದಾರೆ. ಅವರಿಗೆ ನೆರವಾಗುವ ನಿಟ್ಟಿನಲ್ಲಿ ಎಂ.ಕೆ. ಕವಟಗಿಮಠ ಚಾರೀಟಿ ವತಿಯಿಂದ ಪಿಗ್ಮಿ ಸಂಗ್ರಹಕರಿಗೆ ಹಾಗೂ ಸಿಬ್ಬಂದಿಗಳಿಗೆ ಕರ್ನಾಟಕ ಸರಕಾರದ ವಿಧಾನ ಪರಿಷತ್ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಕಿಟ್ ವಿತರಿಸಿದರು. ದಿನಾಂಕ 07.06.2021 ರ ಸೋಮವಾರ ಸಿಎಲ್‌ಇ ಸಂಸ್ಥೆಯಲ್ಲಿ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಹಕಾರಿ ಸಿಬ್ಬಂದಿ ಹಾಗೂ ಪಿಗ್ಮಿ ಸಂಗ್ರಾಹಕರು ಸಾಕಷ್ಟು ತೊಂದರೆಯಲ್ಲಿದ್ದು ಅಂತಹವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಅವರಿಗೆ ಪಡಿತರ ಕಿಟ್ ವಿತರಿಸಲಾಗುವುದು ಎಂದರು. ಒಟ್ಟು 870 ಸಂಸ್ಥೆಗಳ 4707 ಕಡು ಬಡವ ಸಿಬ್ಬಂದಿಗಳಿಗೆ ಕಿಟ್ ನೀಡಲಾಗುವುದು. ಸಮಾಜದ ಕಟ್ಟ ಕಡೆಯ ವ್ಯಕ್ತಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುವ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಕವಟಗಿಮಠ ಕುಟುಂಬದಿಂದ ಚಿಕ್ಕೋಡಿ ಶ್ರೀಸಾಯಿ ಸೇವಾ ಪರಿವಾರಕ್ಕೆ ಆಧುನಿಕ ಸೌಲಭ್ಯವುಳ್ಳ ಅಂಬುಲೆನ್ಸ್ ನೀಡಲಾಗುವುದು ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಪುರಸಭೆ ಅಧ್ಯಕ್ಷ ಪ್ರವೀಣ ಕಾಂಬಳೆ, ಆದಿನಾಥ ಶೆಟ್ಟಿ ಶರದ ಕವಟಗಿಮಠ ಹಾಗೂ ಅಜೇಯ ಕವಟಗಿಮಠ ಉಪಸ್ಥಿತರಿದ್ದರು.

ಶ್ರೀ ಮಹಾಂತೇಶ್ ಕವಟಗಿಮಠ ರವರು ಮಾತನಾಡುತ್ತ ರಾಜ್ಯ ಸರಕಾರದ ಗ್ರಾಮ ಪಂಚಾಯತಿ ಸದಸ್ಯರು ಕೊರೊನಾ ವಾರಿಯರ್ಸ್ ಆಗಿ ಕಾರ್ಯ ಮಾಡುತ್ತಿರುವ ನಿಟ್ಟಿನಲ್ಲಿ ಅವರಿಗೂ ವ್ಯಾಕ್ಸಿನ್ ನೀಡುವ ಆದೇಶವನ್ನು ಮುಖ್ಯಮಂತ್ರಿಗಳು ಹೊರಡಿಸಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ವಾಕ್ಸಿನ್ ಪಡೆದುಕೊಳ್ಳುವಂತೆ ಮನವಿ ಮಾಡಿದರು.



## ಸಂಕಷ್ಟದ ಕಾಲದಲ್ಲಿ ಸಂಜೀವಿನಿಯಾದ – ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ



**ಬೀದರ :** ಕೊರೋನಾ ಮಹಾಮಾರಿಯ ಲಾಕ್‌ಡೌನ್ ನಿಂದ ಬಡವರು, ದೀನಗುಲಿ ಕಾರ್ಮಿಕರು ಒಂದು ಹೊತ್ತಿನ ತುತ್ತಿಗಾಗಿ ಪರಿತಪ್ಪಿಸುತ್ತಿರುವುದು ಸರ್ವೆಸಾಮಾನ್ಯವಾಗಿದೆ. ಬಡವರ ಕೈಗಳಿಗೆ ಕೆಲಸವಿಲ್ಲದೆ ತಮ್ಮ ಜೀವನ ಸಾಗಿಸುವುದೇ ದುಸ್ತರವಾದ ಸಂದರ್ಭದಲ್ಲಿ, ಜೀವನದ ಒಂದು ಹೊತ್ತಿನ ತುತ್ತಿಗೆ ಆಸರೆ ಆಗಿದೆ ನಗರದ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ, ಸಂಕಷ್ಟದ ಸಮಯವನ್ನು ಅರಿತ ಆಡಳಿತ ಮಂಡಳಿ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ಇವರು ನಗರದ ವಿವಿಧ ಬಡಾವಣೆಯಲ್ಲಿ ಆಹಾರ ಸಾಮಗ್ರಿಗಳನ್ನು ಬಡವರಿಗೆ ಮತ್ತು ಕೂಲಿ ಕಾರ್ಮಿಕರಿಗೆ ವಿತರಿಸಿದರು.

ಬೀದರ ನಗರದ ನೌಬಾದ ಹತ್ತಿರ ವಾಸವಾಗಿರುವ ಅಲೆಮಾರಿ ಜನಾಂಗ, ಆಟೋ ನಗರದಲ್ಲಿ ದುಡಿಯುವ ದೀನಗುಲಿ ಕಾರ್ಮಿಕರಿಗೆ, ವಿವಿಧ ಭಾಗದಲ್ಲಿ ವಾಸವಾಗಿರುವ ಬಡವರಿಗೆ 3 ಕೆ.ಜಿ ಅಕ್ಕಿ, ಬೇಳೆ, ಎಣ್ಣೆ, ಖಾರ, ಉಪ್ಪು ಸೇರಿದ ಒಟ್ಟು 300 ಪೊಟಣ್ಣಗಳನ್ನು ಮಾಡಿ ವಿತರಿಸಲಾಯಿತ್ತು.

ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕ, ರಾಜಶೇಖರ ನಾಗಮೂರ್ತಿ, ಹಿರಿಯ ಸಹಕಾರಿ ಶ್ರೀಕಾಂತ ಮೋದಿ, ವಿಜಯಕುಮಾರ ಗಜರೆ, ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಶಿವರಾಜ ಹೂಗಾರ, ಸಿಬ್ಬಂದಿಗಳಾದ ಶಿವಾನಂದ, ಅನೀಲಕುಮಾರ, ಸಂಜೀವಕುಮಾರ, ಶ್ರೀಕಾಂತ ಮುಂತಾದವರು ವಿತರಣೆಯಲ್ಲಿ ಉಪಸ್ಥಿತರಿದ್ದರು.

## ಅಧಿಕಾರ ಇದ್ದರೂ, ಇಲ್ಲದಿದ್ದರೂ ಜನಸೇವೆ – ಶ್ರೀ ಹೆಚ್.ವಿ ರಾಜೀವ್
## 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಪ್ರಾರಂಭ



**ಮೈಸೂರು :** ಅಧಿಕಾರ ಇದ್ದರೂ ಇಲ್ಲದೆ ಇದ್ದರೂ ಜನಸೇವೆಯ ಮೂಲಕವೇ ಗಮನ ಸೆಳೆಯುತ್ತಾರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್. ವಿ ರಾಜೀವ್ ಕೋವಿಡ್ ಮೊದಲನೇ ಅಲೆಯ ವಿರುದ್ಧದ ಹೋರಾಟದಲ್ಲಿ ರಾಜೀವ್ ನೀಡಿದ ಕೊಡುಗೆ ಅನನ್ಯವಾದದ್ದು. ಕೋವಿಡ್ ಮೊದಲನೇ ಅಲೆಯ ಸಂದರ್ಭ ಸಾಕಷ್ಟು ನಿರಾಶ್ರಿತರು ಹಸಿವಿನಿಂದ ಬಳಲುತ್ತಿರುವುದನ್ನು ಗಮನಿಸಿದ ಅವರು ತಮ್ಮೊಂದಿಗೆ ಒಂದಷ್ಟು ಯುವಕರ ತಂಡವನ್ನು ಕಟ್ಟಿಕೊಂಡು ನಿತ್ಯ ನಿರಾಶ್ರಿತರು ಸೇರಿದಂತೆ ಹಲವರಿಗೆ ಆಹಾರ ಪೂರೈಕೆ ಮಾಡುವ ಮೂಲಕ ಜನ ಸೇವೆಗೆ ಮಾದರಿಯಾದರು.

ಕೋವಿಡ್ ಎರಡನೇ ಅಲೆಯಯ ಸಂದರ್ಭದಲ್ಲೂ ಹೆಚ್.ವಿ ರಾಜೀವ್ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದಾರೆ. ಇದೀಗ ಅವರಿಗೆ ನಗರದಲ್ಲಿ ಆಸ್ಪತ್ರೆಗಳ ಹಾಸಿಗೆಗಳ ನಿರ್ವಹಣಾ ಸಮಿತಿಯ ಸಂಚಾಲಕ ಸ್ಥಾನದ ಜವಾಬ್ದಾರಿಯನ್ನು ಸರ್ಕಾರ ವಹಿಸಿದೆ. ಕೇವಲ ಸಂಚಾಲಕ ಸ್ಥಾನದ ಜವಾಬ್ದಾರಿ ನೀಡಿದ ಮಾತ್ರಕ್ಕೆ ಇವರು ಜನ ಸೇವೆಗೆ ಮುಂದಾಗಿಲ್ಲ. ರಾಜೀವ್ ಅವರಿಗೆ ಹಾಸಿಗೆಗಳ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸುವ ಮುನ್ನವೇ ಅವರು ಮುಡಾದಲ್ಲಿ ಸಭೆ ನಡೆಸಿ ನಗರದ ತುಳಸಿದಾಸಪ್ಪ ಆಸ್ಪತ್ರೆಯಲ್ಲಿ ಕಾವೇರಿ ಆಸ್ಪತ್ರೆಯ ಸಹಕಾರದೊಂದಿಗೆ 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಪ್ರಾರಂಭಿಸಿದರು. ಇವರ ಸೇವಾ ಕಾರ್ಯವನ್ನು ಕಂಡ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಎಸ್.ಟಿ. ಸೋಮಶೇಖರ್ ರಾಜೀವ್ ಅವರಿಗೆ ನಗರದ ಆಸ್ಪತ್ರೆಗಳ ಹಾಸಿಗೆಗಳ ನಿರ್ವಹಣೆಯ ಜವಾಬ್ದಾರಿ ವಹಿಸಿದರು.

ಹಾಸಿಗೆಗಳ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡ ನಂತರ ರಾಜೀವ್, ಸಭೆ ನಡೆಸಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸಿದ ಪರಿಣಾಮ ಹಾಸಿಗೆ ಇದ್ದರೂ ಇಲ್ಲವೆಂದು ಸುಳ್ಳು ಮಾಹಿತಿ ನೀಡುತ್ತಿದ್ದ ಕೆಲವು ಖಾಸಗಿ ಆಸ್ಪತ್ರೆಗಳ ಬಂಡವಾಳ ಬಯಲಾಗುವ ಜೊತೆಗೆ ಕೋವಿಡ್ ಸೋಂಕಿತರಿಗೆ ಹಾಸಿಗೆ ದೊರೆಯುವಂತೆ ಆಯಿತು. ಇದೀಗ ಪ್ರತಿಯೊಂದು ಖಾಸಗಿ ಆಸ್ಪತ್ರೆಗಳಿಗೆ ಅಧಿಕಾರಿಗಳ ತಂಡ ಪಿಪಿಇ ಕಿಟ್ ಧರಿಸಿ ತೆರಳಿ ಹಾಸಿಗೆಗಳ ನೈಜ ಮಾಹಿತಿಯನ್ನು ಕಲೆ ಹಾಕುತ್ತಿದ್ದಾರೆ. ಪ್ರಾಮಾಣಿ ಕತೆ ಹಾಗೂ ದಕ್ಷತೆ ಇದ್ದರೆ ಎಲ್ಲವೂ ಸಾಧ್ಯ ಎಂಬುದನ್ನು ಹೆಚ್.ವಿ ರಾಜೀವ್ ಕೋವೀಡ್ ಸಂದರ್ಭದಲ್ಲಿ ನಿರೂಪಿಸಿದ್ದಾರೆ.



## ದಿನಸಿ ಕಿಟ್ ವಿತರಣೆ

**ವಿಜಯಪುರ :** ಸ್ವಾಭಿಮಾನಿ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯು ಕೊರೋನಾ ಮಹಾಮಾರಿಯ 2ನೇ ಅಲೆ ಸಂದರ್ಭದಲ್ಲಿ 50 ಕೂಲಿ ಕಾರ್ಮಿಕರ ಕುಟುಂಬಕ್ಕೆ ಸಹಕಾರಿ ವತಿದಿಂದ ದಿನಸಿ ಸಾಮಾನು ಕಿಟ್ ಅನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮಂಗಳೂರು ಸೌಹಾರ್ದ ಸಹಕಾರಿಯಿಂದ ದಿನಸಿ ಸಾಮಾಗ್ರಿ ವಿತರಣೆ ಕಾರ್ಯಕ್ರಮ



**ಮಂಗಳೂರು** : ಮಂಗಳೂರು ಸೌಹಾರ್ದ ಸಹಕಾರಿ ನಿ., 11ನೇ ವಾರ್ಷಿಕೋತ್ಸವದ ಅಂಗವಾಗಿ ಕೋವಿಡ್–19 2ನೇ ಅಲೆಯ ಅಗತ್ಯತೆ ಮೇರೆಗೆ ದಿನಸಿ ಪದಾರ್ಥ, ನಂದಿನಿ ಹಾಲು, ನಂದಿನಿ ಪೇಡ, ಮಾಸ್ಕ ವಿತರಣೆ ಕಾರ್ಯಕ್ರಮವನ್ನು ಶಾಂತಿನಗರದ ಮಂಗಳೂರು ಸ್ಟೋರ್ ಬಳಿ ನಡೆಯಿತು.

ಈ ಸಂದರ್ಭದಲ್ಲಿ ಶ್ರೀ ವಸಂತ ಶೆಟ್ಟಿ, ಪ್ರಾರ್ಥನೆ ನೇರವೇರಿಸಿದರು. ಸಹಕಾರಿ ಅಧ್ಯಕ್ಷರಾದ ಶ್ರೀ ಕೆ. ಭಾಸ್ಕರ್ ರಾವ್ (ಮಾಜಿ ಕಾರ್ಪೋರೇಟರ್) ಅಧ್ಯಕ್ಷತೆ ವಹಸಿದ್ದು ಸ್ವಾಗತ ಮಾಡಿದರು. ಮುಖ್ಯ ಅತಿಥಿಗಳು ದೀಪ ಬೆಳಗಿನ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರು ಮಾಜಿ ಎಂ.ಎಲ್.ಸಿ ಹಾಗೂ ಎ.ಐ.ಸಿ.ಸಿ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಐವನ್ ಡಿಸೋಜಾ ಸಹಕಾರಿಯ ಸದಸ್ಯರಲ್ಲಿ ಅಗತ್ಯ ಉಳ್ಳವರಿಗೆ ಇಂತ ಬಳ್ಳೆ ಜನಪರ ಸಹಾಯ ಈ ಸಮಯ ಅಗತ್ಯತೆ ಬಗ್ಗೆ ಈ ದಿನ ನಾವು ಮಾಸ್ಕ್‌ದರಿಸಿ ಅಂತರ ಕಾಪಡಿ ಲಸಿಕೆ ಪಡೆದುಕೊಂಡು ಕೋರೋನಾ ತೆಡೆಯಲು ಸಹಕರಿಸುವಂತೆ ಸದಸ್ಯರಿಗೆ ಮನವಿ ಮಾಡಿದರು. ಸೇವಾದಳದ ಹಿರಿಯರಾದ ಶ್ರೀ ಪ್ರಭಾಕರ್ ಶ್ರೀಯಾನ್, ವಿಕಾಶ್ ಕಾಲೇಜ್ ಟ್ರಸ್ಟ್, ಜಿ. ಕೂರಗಪ್ಪ ಸಹಕಾರಿ ಉಪಾಧ್ಯಕ್ಷ ಪಿ.ಕೃಷ್ಣಾಭಟ್, ಉದ್ಯಮಿ ಪುನಿತ್ ಶೆಟ್ಟಿ, ಪೋರ್ಕೆಮಾಬಿ ರಾವ್ ಮುಖ್ಯ ಅತಿಥಿಗಳಾಗಿ ಶುಭ ಹಾರೈಸಿದರು.

## ಸ್ನೇಹ ಸಂಗಮ ಸೌಹಾರ್ದ ಸಹಕಾರಿಯಿಂದ ಸಾಮಾಜಿಕ ಸೇವೆ



ತುಮಕೂರು : ಕೋವಿಡ್–19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ ಮತ್ತು ತುಮಕೂರು ಜಿಲ್ಲೆ, ನಗರ ಮತ್ತು ಗ್ರಾಮೀಣ ಪ್ರದೇಶದ ಜನರ ಅನುಕೂಲಕ್ಕಾಗಿ ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಜಿ.ಸಿ.ರಸ್ತೆ, ತುಮಕೂರು, ಸದರಿ ಸಹಕಾರಿಯ ವತಿಯಿಂದ 200 ಪಲ್ಸ್ ಆಕ್ಸಿಮೀಟರ್, 25,000 3ಪ್ಲೇ ಸರ್ಜಿಕಲ್ ಮಾಸ್ಕ್ ಮತ್ತು 100 ಬಾಟಲಿ ಹ್ಯಾಂಡ್ ಸ್ಯಾನಿಟೈಜರ್ ಅನ್ನು ಮಾನ್ಯ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ. ಜೆ.ಸಿ.ಮಾಧುಸ್ವಾಮಿ ರವರಿಗೆ, ತುಮಕೂರು ಲೋಕಸಭಾ ಸದಸ್ಯರಾದ ಶ್ರೀ. ಎಂ.ಪಿ. ಬಸವರಾಜು ಮತ್ತು ತುಮಕೂರು ಶಾಸಕರಾದ ಶ್ರೀ.ಜಿ.ಬಿ.ಜ್ಯೋತಿಗಣೇಶ್ ಇವರುಗಳ ಮುಖಾಂತರ ತುಮಕೂರು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಯಿತು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಶಿವಮೊಗ್ಗ** : ರಾಜ್ಯ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಇದರ 2021–26 ರ ಅವಧಿಗೆ ನಡೆದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸಾಮಾನ್ಯ, ಮಹಿಳೆ, ಪ.ಜಾತಿ, ಪ.ಪಂಗಡ, ಹಾಗೂ ಪ್ರವರ್ಗ ಎ ಮತ್ತು ಬಿ ಮೀಸಲಿರಿಸಿದ ಒಟ್ಟು 17 ನಿರ್ದೇಶಕರ ಸ್ಥಾನಗಳಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಸ್.ಷಡಾಕ್ಷರಿರವರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಗಳೂರು ವಿಭಾಗೀಯ ಉಪಾಧ್ಯಕ್ಷರು ಹಾಲಿ ಸಹಕಾರಿಯ ಅಧ್ಯಕ್ಷರು ಆದ ಶ್ರೀ ಆರ್.ಮೋಹನ್ ಕುಮಾರ್ ರವರು, ಶ್ರೀ ಐ.ಪಿ.ಶಾಂತರಾಜ್, ಶ್ರೀ ಎಸ್.ಹೆಚ್.ಸುರೇಶ್, ಡಾ.ಸಿ.ಎ.ಹಿರೇಮಠ, ಶ್ರೀ ಎಸ್. ಆರ್ ನರಸಿಂಹಮೂರ್ತಿ, ಶ್ರೀ ಟಿ.ಜಿ ಅಶೋಕ್, ಶ್ರೀ ಟಿ.ಸಿ.ಬ್ಯಾಟೆಗೌಡ, ಶ್ರೀ ಎನ್.ಎಂ.ರಂಗನಾಥ, ಶ್ರೀ ಎಸ್.ಸಿ.ಚೀಲೂರು, ಶ್ರೀ ಟಿ.ರಾಜಪ್ಪ, ಶ್ರೀ ವಿ.ಲಕ್ಷ್ಮಣ, ಶ್ರೀ ಡಿ.ವಿ.ಸತೀಶ್, ಶ್ರೀ ರಾಜು ಲಿಂಬು ಚವ್ಹಾಣ್, ಕು. ಟಿ.ವಿ.ತಾರಾ, ಶ್ರೀಮತಿ ಎಸ್.ರೇಖಾ, ಶ್ರೀಮತಿ ಜಿ.ಪಿ.ಅನಿತಾ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಿ ನೌಕರರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಇದರ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಆರ್.ಮೋಹನ್ ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಎಸ್.ಹೆಚ್.ಸುರೇಶ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ

## ದಿನಸಿ ವಿತರಣೆ ಕಾರ್ಯಕ್ರಮ



**ಕಲಕೇರಿ :** ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಕೇರಿ ಸಿಂದಗಿ ತಾಲೂಕು ಈ ಸಹಕಾರಿಯ ಆಡಳಿತ ಮಂಡಳಿ ವತಿಯಿಂದ ಕಲಕೇರಿ ಗ್ರಾಮದಲ್ಲಿ ಬಡ ಜನರಿಗೆ ಉಚಿತವಾಗಿ ದವಸ ಧಾನ್ಯ ವಿತರಣೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯಿಂದ ಸಾರ್ವಜನಿಕ ಸಹಕಾರಿ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳ ಹಸ್ತಾಂತರ ಕಾರ್ಯಕ್ರಮ



**ಬೆಂಗಳೂರು :** ಕೋವಿಡ್-19 ಮರಣಾಂತಿಕ ಖಾಯಿಲೆಯೂ ದೇಶಾದ್ಯಾಂತ ವ್ಯಾಪಕವಾಗಿ ಹರಡುತ್ತಿದ್ದು, ಇಂತಹ ತುರ್ತು ಸಂದರ್ಭದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು, ಸಹಕಾರಿಯ ಧರ್ಮಾರ್ಥ ನಿಧಿಯಿಂದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಯಲಹಂಕ ಇಲ್ಲಿಗೆ ಸಾರ್ವಜನಿಕ ಉಪಯೋಗಕ್ಕಾಗಿ ವೈದ್ಯಕೀಯ ಉಪಕರಣ ಹಸ್ತಾಂತರ ಕಾರ್ಯಕ್ರಮವನ್ನು ದಿನಾಂಕ 29.05.2021 ಶನಿವಾರ ಬೆಳಗ್ಗೆ 11.00 ಗಂಟೆಗೆ ಆಯೋಜಿಲಾಗಿತ್ತು, ಕಾರ್ಯಕ್ರಮಕ್ಕೆ ಶ್ರೀಯುತ ಎಸ್ ಆರ್ ವಿಶ್ವನಾಥ್, ಅಧ್ಯಕ್ಷರು, ಬಿ.ಡಿ.ಎ ಹಾಗೂ ಶಾಸಕರು, ವಿಧಾನಸಭಾ ಕ್ಷೇತ್ರ ಯಲಹಂಕ, ಸಹಕಾರಿಯ ಅಧ್ಯಕ್ಷರಾದ ಎಂ. ಮುನಿರೆಡ್ಡಿರವರು ಮತ್ತು ಆಡಳಿತ ಮಂಡಲಿ ನಿರ್ದೇಶಕರ ಸಮ್ಮುಖದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ವೈದ್ಯಕೀಯ ಉಪಕರಣಗಳನ್ನು ಹಸ್ತಾಂತರಿಸಲಾಯಿತು.

## ಗಾಯಿತ್ರಿದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿಯಿಂದ ದಿನಸಿ ವಿತರಣೆ ಕಾರ್ಯಕ್ರಮ



**ಗುಳೇದಗುಡ್ಡ :** ದಿನಾಂಕ 24.05.2021 ರಂದು ಮಹಾಮಾರಿ ಕೊರೊನಾ 2ನೇ ಅಲೆಯ ಸಾಂಕ್ರಾಮಿಕ ರೋಗ ಹರಡಿರುವ ಹಿನ್ನೆಲೆಯಲ್ಲಿ ಸರ್ಕಾರ ವಿಧಿಸಿರುವ ಲಾಕ್‌ಡೌನ್‌ದಿಂದ ತತ್ತರಿಸಿದ ಬಡ ಜನತೆಗೆ ಸ್ಥಳೀಯ ಶ್ರೀ ಗಾಯಿತ್ರಿದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಇದರ ವತಿಯಿಂದ ಆಹಾರ ಸಾಮಗ್ರಿಗಳನ್ನು ವಿತರಿಸುವುದರೊಂದಿಗೆ ಮಾನವೀಯತೆ ಮೆರೆಯುವ ಮೂಲಕ ಬಡ ಜನತೆಗೆ ಆಸರೆಯಾಗಿದ್ದಾರೆ.

ಗಾಯಿತ್ರಿದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಪದಾಧಿಕಾ-ರಿಗಳು ಪಟ್ಟಣದ ವಿವಿಧ ಬಡಾವಣೆಯ ಸಂತ್ರಸ್ತ ಬಡ ಜನರಿಗೆ ಗೋದಿಹಿಟ್ಟು, ಸಕ್ಕರೆ, ಅಡುಗೆ ಎಣ್ಣೆ ಒಳಗೊಂಡ ಆಹಾರದ ಸಾಮಾಗ್ರಿಗಳನ್ನು ವಿತರಣೆ ಮಾಡಿದರು.

ಸಹಕಾರಿಯ ಅಧ್ಯಕ್ಷೆ ಭಾರತಿ ದಡಿ, ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಮಳ್ಳಿ, ನಿರ್ದೇಶಕರಾದ ಸಾವಿತ್ರಿ ದಡಿ, ಸೀತಾ ಮಂಕಣಿ, ನಾರಾಯಣ ದಡಿ, ಗಂಗವ್ವ ಚೌಡಾಪೂರ, ನೂರಂದಪ್ಪ ಮಳ್ಳಿ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ರಾಘವೇಂದ್ರ ನೇಮದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೋವಿಡ್ ಸೇವಾ ಕೇಂದ್ರವಾಗಿ - ಮಾತೃಭೂಮಿ ಸೌಹಾರ್ದ ಸಹಕಾರಿಯ ಶಾಖೆಗಳು

**ಉಜಿರೆ :** ಕೊರೊನಾ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿರುವ ಪರಿಣಾಮವಾಗಿ ಜನರ ಜೀವನ ಅಸ್ತವ್ಯಸ್ತವಾಗಿದೆ. ಈ ಸಂದರ್ಭದಲ್ಲಿ ಮಾತೃಭೂಮಿ ಸೌಹಾರ್ದ ಸಹಕಾರಿ ಸಂಸ್ಥೆಯು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಜನತೆಯ ಬೆಂಗಾವಲಾಗಿ ನಿಂತಿದೆ. ಸಹಕಾರಿಯ ಆಡಳಿತ ಮಂಡಳಿಯು ಸಹಕಾರಿಯ ಶಾಖೆಗಳ ಮೂಲಕ ಅಗತ್ಯ ಮುಂಜಾಗ್ರತೆ ವಹಿಸಿ ಸಹಾಯವಾಣಿ ಕೇಂದ್ರಗಳಾಗಿ ಕರ್ತವ್ಯ ನಿರ್ವಹಿಸುತ್ತಿವೆ. 2021ರ ಮಾರ್ಚ್ 31ಕ್ಕೆ ಮೊದಲು ಸದಸ್ಯತ್ವ ಪಡೆದ ಯಾವುದೇ ಸದಸ್ಯರಿಗೆ ಕೋವಿಡ್ ಸಂಕಷ್ಟಕ್ಕೆ ತುತ್ತಾಗಿ ಜೀವನಾವಶ್ಯಕ ಸಾಮಾಗ್ರಿಗಳ ಅವಶ್ಯಕತೆ ಇದ್ದಲ್ಲಿ ಆಯಾ ಪ್ರದೇಶದ ಶಾಖೆಯನ್ನು ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

ಕೋವಿಡ್ ಸಮಸ್ಯೆಗೆ ತುತ್ತಾಗಿ ಸಂಕಷ್ಟಕ್ಕೀಡಾಗಿರುವ ಸದಸ್ಯರಿಗೆ ತುರ್ತಾಗಿ ಆರ್ಥಿಕ ಸಹಾಯ ಧನವನ್ನು ನೀಡಲು ಯೋಜಿಸಿದ್ದು ಅಂತಹ ಸದಸ್ಯರ ವಿವರಗಳೊಂದಿಗೆ ಪೂರ್ಣ ಮಾಹಿತಿಯನ್ನು ಉಜಿರೆ ಮಾತೃಭೂಮಿ ಸೌಹಾರ್ದ ಸಹಕಾರಿ ಸಂಸ್ಥೆಯ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸಬೇಕಾಗಿ ಸಹಕಾರಿಯು ತಿಳಿಸಿದೆ.

# ಕೊರೊನಾ 2ನೇ ಸಮಯದಲ್ಲಿ
# ಸಿದ್ಧಸಿರಿ ಸೌಹಾರ್ದ ಸಹಕಾರಿಯಲ್ಲಿ ಸಾಮಾಜಿಕ ಸೇವಾ ಕಾರ್ಯಕ್ರಮಗಳು



**ವಿಜಯಪುರ :** ಸಿದ್ಧಸಿರಿ ಸೌಹಾರ್ದ ಸಹಕಾರಿ ಅಧ್ಯಕ್ಷರು ವಿಜಯಪುರ ಶಾಸಕರಾದ ಶ್ರೀ ಬಸನಗೌಡ ರಾ ಪಾಟೀಲ (ಯತ್ನಾಳ)ರವರು ನಗರಾದ್ಯಾಂತಹ ಉಚಿತವಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಕರೆಯ ಮೇರೆಗೆ ಮನೆ ಮನೆಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ನಗರದ ವಜ್ರ ಹುನಮಾನ ದೇವಸ್ಥಾನದಿಂದ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ವೈದ್ಯಾಧಿಕಾ–ರಿಗಳೊಂದಿಗೆ ಉಚಿತ ಲಸಿಕೆ ಅಭಿಯಾನವನ್ನು ಪ್ರಾರಂಭಿಸಲಾಯಿತು. ಪ್ರತಿ ದಿನ ನಗರದ ವಾರ್ಡಗಳಲ್ಲಿ ಸಮುದಾಯ ಕೇಂದ್ರಗಳನ್ನು, ದೇವಸ್ಥಾನದ ಆವರಣಗಳನ್ನು ಉಪಯೋಗಿಸಿಕೊಂಡು ಲಸಿಕೆ ನೀಡಲಾಗುತ್ತಿದೆ. ಲಸಿಕೆ ಹಾಕಿಸಿಕೊಳ್ಳಲು ಬರುವ ಹೋಗುವ ಜನರಿಗೆ ಶ್ರೀ ಸಿದ್ದೇಶ್ವರ ಸಂಸ್ಥೆಯ ಶಾಲೆಯ ಬಸುಗಳನ್ನು ಉಚಿತವಾಗಿ ಸೇವೆಯನ್ನು ನೀಡುತ್ತಿದೆ.

ದಿನಾಂಕ 30.04.2021 ಶುಕ್ರವಾರ ದಂದು ನಗರ ಶಾಸಕರು ಹಾಗೂ ಸಿದ್ಧಸಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ರಾ ಪಾಟೀಲ(ಯತ್ನಾಳ) ಜಿಲ್ಲಾ ಆರೋಗ್ಯ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಆಕ್ಸಿಜನ್ ಹಾಗೂ ಸಾಮಾನ್ಯ ಬೆಡ್ ಗಳನ್ನು ಹೊಂದಿದ ನಗರದ ಸೋಲಾಪುರ ರಸ್ತೆಯಲ್ಲಿರುವ ಜೈನ್ ಕಾಲೇಜ ಕಟ್ಟಡದಲ್ಲಿ ಶ್ರೀ ಸಿದ್ಧೇಶ್ವರ ಸಂಸ್ಥೆ, ಶ್ರೀ ಜೈನ್ ಪೌಂಡೇಶನ್ ಹಾಗೂ ಸಿದ್ಧಸಿರಿ ಸೌಹಾರ್ದ ಸಹಕಾರಿ, ನಿಯಮಿತ. ವಿಜಯಪುರ ಇವುಗಳ ಸಹಭಾಗಿತ್ವದಲ್ಲಿ ಕೋವಿಡ್ ಕೇರ್ ಸೆಂಟರ್ ಪ್ರಾರಂಭಕ್ಕೆ ಚಾಲನೆ ನೀಡಲಾಯಿತು ಮತ್ತು ಶ್ರೀ ಸಿದ್ಧೇಶ್ವರ ಗುಡಿ ಹತ್ತಿರದ ಕೃಷ್ಣಾ ಕಾಂಪ್ಲೆಕ್ಸ್‌ನಲ್ಲಿ ಶ್ರೀ ಈಶ್ವರಗೌಡ ರಾ ಪಾಟೀಲ (ಯತ್ನಾಳ) ಡಾಯಲಿಸಿಸ್ ಕೇಂದ್ರದಲ್ಲಿ ಪ್ರತ್ಯೇಕ 25 ಬೆಡ್ ಗಳ ಸೆಂಟ್ರಲೈಜ ಆಕ್ಸಿಜನ್ NIV ವೆಂಟಿಲೇಟರ್ ಹೊಂದಿದ ಕೋವಿಡ್ ಆಸ್ಪತ್ರೆಯನ್ನು ಉದ್ಘಾಟಿಸಿ ರೋಗಿಗಳಿಗೆ ಉಚಿತವಾಗಿ ಬೆಳಗ್ಗೆ ಉಪಹಾರ ಮತ್ತು ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆಯನ್ನು ಬೆಡ್‌ಗಳ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

### "ಸಿದ್ಧಸಿರಿ ಆತ್ಮನಿರ್ಭರ ವಿಜಯಪುರ " ಸಾಲ ಯೋಜನೆ

ಪ್ರಧಾನ ಮಂತ್ರಿ ನರೇಂದ್ರ ಮೋದಿಜಿಯವರ ಆಶಯದಂತೆ ನಗರ ಶಾಸಕರು ಹಾಗೂ ಸಿದ್ಧಸಿರಿ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀ ಬಸನಗೌಡ ರಾ ಪಾಟೀಲ(ಯತ್ನಾಳ)ಇವರ ನೇತೃತ್ವದಲ್ಲಿ ಸಿದ್ಧಸಿರಿ ಆತ್ಮನಿರ್ಭರ ವಿಜಯಪುರ, ಆಮ್ಲಜನಕ ಉತ್ಪಾದನೆ ಹೊಸ ಘಟಕ ನಿರ್ಮಾಣಕ್ಕೆ ಮತ್ತು ವೆಂಟಿಲೇಟರ್‌ಗಳ ಖರೀದಿಗೆ ಸಿದ್ಧಸಿರಿ ಸೌಹಾರ್ದ ಸಹಕಾರಿಯಿಂದ ಸಾಲ ಸೌಲಭ್ಯ, ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಯಿಂದ ಜನ ಮರಣ ಹೊಂದುತ್ತಿದ್ದನ್ನು ಪರಿಗಣಿಸಿ. ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ. ವಿಜಯಪುರ. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ರಾ. ಪಾಟೀಲ (ಯತ್ನಾಳ) ನಗರ ಶಾಸಕರು ಮತ್ತು ಆಡಳಿತ ಸಮಿತಿ ಸದಸ್ಯರು "ಸಿದ್ಧಸಿರಿ ಆತ್ಮನಿರ್ಭರ ವಿಜಯಪುರ " ಎಂಬ ಸಾಲ ಯೋಜನೆಯನ್ನು ಪ್ರಾರಂಭಿಸಲಾಗಿದೆ

### ಕೊರೊನಾ ವಾರಿಯರ್ಸ್‌ಗಳಿಗೆ ಪ್ರೋತ್ಸಾಹ ಧನ :

ನಗರದಲ್ಲಿ ಕೋವಿಡ್ ಕೇರ್ ಸೆಂಟರ್‌ನಲ್ಲಿ ನಿರಂತರವಾಗಿ ಸೇವೆಯನ್ನು ಸಲ್ಲಿಸುತ್ತಿರುವ ಕೊರೋನಾ ವಾರಿಯರ್ಸ್‌ಗಳಿಗೆ 5 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುವ ಮೂಲಕ ಕೊರೋನಾ ವಾರಿಯರ್ಸ್‌ಗಳಿಗೆ "ಆತ್ಮಸ್ಥೈರ್ಯ ಹಾಗೂ ಧನ್ಯವಾದ ಅರ್ಪಿಸುವ" ಕಾರ್ಯವನ್ನು ಕೈಕೊಂಡರು. ಮತ್ತು ಎ.ಪಿ.ಎಮ್.ಸಿಯಲ್ಲಿ ಕಾರ್ಯನಿರ್ವಹಿಸುವ ವಾಹನ ಚಾಲಕರಿಗೆ 5 ಸಾವಿರಗಳ ವಿಶೇಷ ಪ್ರೋತಾಹ್ಸ ಧನ ನೀಡಲಾಯಿತು ಮತ್ತು ನಗರದ ಎಲ್ಲ ಆಶಾ ಕಾರ್ಯಕರ್ತೆಯರು ಹಾಗೂ ಎ.ಎನ್.ಎಂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಸೇರಿ ಒಟ್ಟು 145 ಜನ ಸಿಬ್ಬಂದಿಗಳಿಗೆ ಪ್ರತಿಯೊಬ್ಬರಿಗೂ 5000/– ರೂ ಗಳ ಒಳಗೊಂಡ ಸ್ಮಾರ್ಟಕಾರ್ಡ್‌ನಿಂದ 5000/– ರೂ ಗಳವರಿಗಿನ ಅಗತ್ಯ ವಸ್ತುಗಳನ್ನು ಶ್ರೀ ಸಿದ್ದೇಶ್ವರ ಸೂಪರ್ ಬಜಾರ್ ಅಥವಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಎಸ್ ಹೈಪರ್ ಮಾರ್ಟನಿಂದ ಖರೀದಿಸುವ ಸಲುವಾಗಿ ಸ್ಮಾರ್ಟಕಾರ್ಡ್ ನೀಡಲಾಗಿದೆ.

### ಕೋರೋನಾದಿಂದ ಮೃತಪಟ್ಟ ಖಾಸಗಿ ಉದ್ಯೋಗದಲ್ಲಿರುವ / ಖಾಸಗಿ ಉದ್ಯೋಗದಿಂದ ಜೀವನವನ್ನು ನಿರ್ವಹಣೆ ಸಂದರ್ಭ ನಿಂತು ಹೋದಲ್ಲಿ ಕುಟುಂಬಕ್ಕೆ ಸಹಾಯಹಸ್ತ :-

ವಿಜಯಪುರ ನಗರ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕೊರೋನಾದಿಂದ ಮೃತಪಟ್ಟ ಕುಟುಂಬಗಳಲ್ಲಿ ಅವರ ಜೀವನ ನಿರ್ವಹಣೆಗೆ ಸಹಾಯ ಹಸ್ತವಾಗಿ ಶ್ರೀ ಸಿದ್ದೇಶ್ವರ ಸಂಸ್ಥೆ ಹಾಗೂ ಸಿದ್ಧಸಿರಿ ಸೌಹಾರ್ದ ಸಹಕಾರಿ ಸಹಭಾಗಿತ್ವದಲ್ಲಿ ಅವರ ಕುಟುಂಬಕ್ಕೆ ಆರ್ಥಿಕ ಸಹಾಯ ಮಾಡುತ್ತಿದೆ.

### ಶ್ರೀ ಬಸನಗೌಡ ರಾ ಪಾಟೀಲ ಯತ್ನಾಳರವರಿಂದ ಧನ ಸಹಾಯ

ಕರೊನಾದಿಂದ ನಗರದ ಜೋರಾಪುರ ಪೇಠದ ಶ್ರೀಶೈಲ ಶಾಬಾದಿ ಕುಟುಂಬಸ್ಥರಿಗೆ ಧನ ಸಹಾಯ ಮಾಡಿದ್ದು ಅವರ ಧರ್ಮ ಪತ್ನಿ ಗೀತಾಂಜಲಿ ಶಾಬಾದಿ ಅವರಿಗೆ ಶಾಸಕರು ವ್ಯಯಕ್ತಿಕವಾಗಿ ಒಂದು ಲಕ್ಷ ರೂಪಾಯಿ ಮತ್ತು ಅವರ ಇಬ್ಬರ ಮಕ್ಕಳ ಹೆಸರಿನಿಂದ ತಲಾ ರೂ. 50,000/– ಠೇವಣಿಯನ್ನು ಮಾಡಿ ಠೇವಣಿ ಪತ್ರವನ್ನು ನೀಡಲಾಯಿತು.

### ಶ್ರೀ ಸಿದ್ದೇಶ್ವರ ಸಂಸ್ಥೆ ಮತ್ತು ಸಿದ್ಧಸಿರಿ ಸೌಹಾರ್ದದ ವತಿಯಿಂದ ಕೊವೀಡ್ ರೋಗಿಗಳಿಗೆ - ಸಂಸ್ಥೆಯ ಬಸಿನಲ್ಲಿ ಆಕ್ಸಿಜೆನ್ ಮಿಷೀನ್ ಒಳಗೊಂಡ ಬೆಡ್ ವ್ಯವಸ್ಥೆ :-

ರಾಜ್ಯದಲ್ಲಿ ಖಾಸಗಿ ಸಂಸ್ಥೆಯಿಂದ OXYGEN ON WHEELS ವ್ಯವಸ್ಥೆಯನ್ನು ಸನ್ಮಾನ್ಯ ಶ್ರೀ ಬಸನಗೌಡ ರಾ ಪಾಟೀಲ (ಯತ್ನಾಳ) ವಿಜಯಪುರ ನಗರ ಶಾಸಕರು, ಶ್ರೀ ಸಿದ್ದೇಶ್ವರ ಸಂಸ್ಥೆ ಮತ್ತು ಸಿದ್ಧಸಿರಿ ಸೌಹಾರ್ದದದ ಅಧ್ಯಕ್ಷರ ಇವರ ನೇತೃತ್ವದಲ್ಲಿ ಸಂಸ್ಥೆಯ ಬಸಿನಲ್ಲಿ ಆಕ್ಸಿಜನ್ ಮಷೀನ್ ಒಳಗೊಂಡ ಬೆಡ್ ವ್ಯವಸ್ಥೆಯನ್ನು ಮಾಡಿದ್ದು ನಗರ ಪ್ರದೇಶದ ದಿಂದ 10 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬರುವ ಕರೆ ಮಾಡುವ ರೋಗಿಯ ಮನೆ ಬಾಗಿಲಿಗೆ ಬಸ್ ಸಂಚ–ರಿಸುತ್ತದೆ. ಬಸಿನಲ್ಲಿ ರೋಗಿಗೆ ಆಕ್ಸಿಜನ್ ಮಿಷೀನ್ ಅಳವಡಿಸಿ ಖಾಸಗಿ/ಸರಕಾರಿ ಆಸ್ಪತ್ರೆಗಳಲ್ಲಿ ಬೆಡ್ ಸಿಗುವವರಿಗೆ ಬಸಿನಲ್ಲಿ ಆರೈಕೆ ಮಾಡಲಾಗುವ ಸವಲತ್ತನ್ನು ನೀಡುವ ಸಾಮಾಜಿಕ ಸೇವೆಯನ್ನು ಶ್ರೀ ಸಿದ್ದೇಶ್ವರ ಸಂಸ್ಥೆ ಮತ್ತು ಸಿದ್ಧಸಿರಿ ಸೌಹಾರ್ದ ಸಹಕಾರಿಯಿಂದ ಪ್ರಾರಂಭಿಸಲಾಗಿದೆ.

# ಭಾವಪೂರ್ಣ ಶ್ರದ್ಧಾಂಜಲಿ



**ಬಳ್ಳಾರಿ :** ಸುಕೋ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀಯುತ ಪರಿಮಾಳಚಾರ್ಯ ಅಗ್ನಿಹೋತ್ರಿ ಇವರು ದಿನಾಂಕ 24.05.2021 ರಂದು ದೈವಾಧೀನರಾಗಿದ್ದಾರೆ. ಇವರು ಸಂಯುಕ್ತ ಸಹಕಾರಿಯ ಅನೇಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದಾರೆ. ಶ್ರೀಯುತರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.



ಇಲಕಲ್ ಸೌಹಾರ್ದ ಪತ್ತಿನ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಾಲಿ ಅಧ್ಯಕ್ಷರಾದ ಶ್ರೀ ನಾರಾಯಣಪ್ಪ ಹೇಮಾದ್ರೆಪ್ಪ ಪತ್ತಾರ ಇವರು ದಿನಾಂಕ 05.05.2021 ಬುಧವಾರದಂದು ದೈವಾಧೀನರಾದರು. ಮಾನ್ಯರು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾಗಿದ್ದರು. ಶ್ರೀಯುತರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.



**ನಾಲ್ಕೂರು** : ಅಮೂಲ್ಯ ಸೌಹಾರ್ದ ಪತ್ತಿನ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ, ಶ್ರೀಮತಿ ಸರೋಜ ಎ ಶೆಟ್ಟಿ, ಕಜ್ಕೆ – ನಾಲ್ಕೂರು ಇವರು ದಿನಾಂಕ 06.05.2021 ಗುರುವಾರದಂದು ದೈವಾಧೀನಾರಾದರು. ಇವರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಸಂತಾಪ ವ್ಯಕ್ತಪಡಿಸಿದ್ದಾರೆ.



**ಕುಂದಾಪುರ :** ದಿನಾಂಕ 17.05.2021 ಮಿತ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಮುಖ್ಯ ಕಾರ್ಯನಿರ್ವಾಣಾಧಿಕಾರಿ ರಮೇಶ್ ಮಡಿವಾಳ ಅವರು ಮೇ 17ರಂದು ಅಸೌಖ್ಯದಿಂದ ನಿಧನ ಹೊಂದಿದರು. ಶ್ರೀಯುತರು 10 ವರ್ಷಗಳಿಂದ ಮಿತ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದರು. ಶ್ರೀಯುತರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.



**ಶಿವಮೊಗ್ಗ :** ಅಮೃತ ದಿನಸಿ ಸೌಹಾರ್ದ ಸಹಕಾರಿ ನಿ., ಗರ್ತಿಕರೆ, ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ ಇದರ ನಿರ್ದೇಶಕರಾದ ಶ್ರೀ ಭಾನುಪ್ರಕಾಶ್ ರವರು ದಿನಾಂಕ 25–5–2021 ರಂದು ದೈವಾಧೀನರಾಗಿದ್ದಾರೆ. ಪ್ರಗತಿ ಪರ ಕೃಷಿ, ಆಹಾರ ಉತ್ಪಾದನೆಯಲ್ಲಿ ಹುಂಚ ಸ್ಪೇಸಿಸ್ ಮೂಲಕ ಮನೆ ಮಾತಾಗಿದ್ದ, ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಯುವಕರಿಗೆ ಸ್ಫೂರ್ತಿಯಾಗಿದ್ದ ಹುಂಚ ಗ್ರಾಮದ ಉದಯೋನ್ಮುಖ ಕೃಷಿಕ. ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ಮಾರಾಟ ಮಾಡಿ ಕೃಷಿಯನ್ನು ಆಧುನಿಕ ಜನರಿಗೆ ಬೇಕಾದಂತೆ ನೀಡಿದ್ದರು. ಶ್ರೀಯುತರ ನಿಧನಕ್ಕೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ.

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಗದಗ ಇದರ ವತಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಗದಗ ಜಿಲ್ಲೆಯ ಹಿರಿಯ ನಿರ್ದೇಶಕರಾದ ದಿವಗಂತ ಆರ್ ಎನ್ ದೇಶಪಾಂಡೆ ಇವರಿಗೆ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಹಕಾರಿಯ ಮ್ಯಾನೇಜರವರ ಸಿಬ್ಬಂದಿವರ್ಗದವರ ಪಿಗ್ಮಿ ಸಂಗ್ರಹಕಾರರ ಹಾಗೂ ಸರ್ವಸದಸ್ಯರಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಹಕಾರಿಯ ಅಧ್ಯಕ್ಷರು ಕಳೆದ ನಾಲ್ಕು ದಶಕಗಳಿಂದ ವಿವಿಧ ಸಂಘ ಸಂಸ್ಥೆಗಳನ್ನು ಕಟ್ಟುವ ನಿಟ್ಟಿನಲ್ಲಿ ತೊಡಗಿದ್ದರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಹಕಾರಿ ಸಂಸ್ಥೆಗಳನ್ನು ಬಲಪಡಿಸಿದವರು ಆರ್ ಎನ್ ದೇಶಪಾಂಡೆ ಹಿರಿಯರಾಗಿ ಎಲ್ಲಾ ಜಾತಿ ಧರ್ಮಗಳನ್ನು ಗೌರವಿಸುತ್ತಾ ಶಿಕ್ಷಣ ಕ್ಷೇತ್ರಕ್ಕೆ ಭೂಮಿದಾನ ಮಾಡುವ ಮೂಲಕ ಸಾವಿರಾರು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಹಲವು ಸಂಘಗಳಿಗೆ ಉದಾರ ದೇಣಿಗೆ ನೀಡಿ ಗೌರವ ಹೆಚ್ಚಿಸಿದರು ದೇಶಪಾಂಡೆ ಅವರ ಅಗಲಿಕೆ ತುಂಬಲಾರದ ನಷ್ಟವಾಗಿದೆ ಎಂಬ ಮಾತನ್ನು ಆಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಬೆಳಗಾವಿ ವಿಭಾಗ

## ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ಹಾಗೂ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕುರಿತು ತರಬೇತಿ ಕಾರ್ಯಕ್ರಮಗಳು

**ಬೆಳಗಾವಿ :** ದಿನಾಂಕ 04 ಮೇ 2021 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ಮತ್ತು ಖಾನಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ತರಬೇತಿಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ಸಂಯೋಜ–ಕರುಗಳಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 90 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

ದಿನಾಂಕ 04 ಮೇ 2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ ಮತ್ತು ರಾಯಭಾಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಮತ್ತು ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 77 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

ದಿನಾಂಕ 05 ಮೇ 2021 ರಂದು ಬೆಳಗಾವಿ ಜಿಲ್ಲೆಯ ಗೋಕಾಕ, ಮೂಡಲಗಿ, ಬೈಲಹೊಂಗಲ, ರಾಮದುರ್ಗ, ಸವದತ್ತಿ, ಚನ್ನಮ್ಮನ ಕಿತ್ತೂರು ಹಾಗೂ ಯರಗಟ್ಟಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರುಗಳಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ಸುಜಯ ಬೆಳವಿ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 124 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರ ಅಂತಿಮಗೊಳಿಸುವಿಕೆ ಮತ್ತು ದಾಖಲಾತಿ ನಿರ್ವಹಣೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

**ಉತ್ತರ ಕನ್ನಡ :** ದಿನಾಂಕ 05 ಮೇ 2021 ರಂದು ಉತ್ತರಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ವಹಿಸಿದ್ದರು. ತರಬೇತಿಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಟೆ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 80 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

ದಿನಾಂಕ 07 ಮೇ 2021 ರಂದು ಉತ್ತರಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ವಹಿಸಿದ್ದರು. ತರಬೇತಿಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ಸಂಯೋಜ–ಕರಾದ ಶ್ರೀ ಗಂಗಾರಾಮ ಕೋಳಾಪ್ಟೆ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 86 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

**ಗದಗ ಮತ್ತು ಧಾರವಾಡ :** ದಿನಾಂಕ 06 ಮೇ 2021 ರಂದು ಗದಗ ಮತ್ತು ಧಾರವಾಡ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 54 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

ದಿನಾಂಕ 08 ಮೇ 2021 ರಂದು ಗದಗ ಮತ್ತು ಧಾರವಾಡ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 44 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

**ಬಾಗಲಕೋಟ :** ದಿನಾಂಕ 07 ಮೇ 2021 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ವಹಿಸಿದ್ದರು. ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 87 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

ದಿನಾಂಕ 12 ಮೇ 2021 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 135 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

**ಹಾವೇರಿ :** ದಿನಾಂಕ 08 ಮೇ 2021 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಬಿ.ಕಲಾಲ್ ಇವರು ವಹಿಸಿದ್ದರು. ತರಬೇತಿಯಲ್ಲಿ ಜಿಲ್ಲಾ ಸಂಯೋಜ-ಕರಾದ ಶ್ರೀ ಕಲ್ಮೇಶ ಮುಡೆಕ್ಕನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 60 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

**ಬೆಳಗಾವಿ :** ದಿನಾಂಕ 10 ಮೇ 2021 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ಮತ್ತು ಖಾನಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರುಗಳಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 87 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

ದಿನಾಂಕ 10 ಮೇ 2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ ಮತ್ತು ರಾಯಭಾಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್

ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಮತ್ತು ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 70 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

ದಿನಾಂಕ 11 ಮೇ 2021 ರಂದು ಬೆಳಗಾವಿ ಜಿಲ್ಲೆಯ ಗೋಕಾಕ, ಮೂಡಲಗಿ, ಬೈಲಹೊಂಗಲ, ರಾಮದುರ್ಗ, ಸವದತ್ತಿ, ಚನ್ನಮ್ಮನ ಕಿತ್ತೂರು ಹಾಗೂ ಯರಗಟ್ಟಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರುಗಳಾದ ಶ್ರೀ ಬಸವರಾಜ ಹೊಂಗಲ ಮತ್ತು ಶ್ರೀ ಸುಜಯ ಬೆಳವಿ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 144 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

**ವಿಜಯಪುರ** : ದಿನಾಂಕ 11 ಮೇ 2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ದರಾಮಪ್ಪ ಚ. ಉಪ್ಪಿನ ಇವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎನ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 65 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ವಿ.ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು.

ದಿನಾಂಕ 12 ಮೇ 2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ದರಾಮಪ್ಪ ಚ. ಉಪ್ಪಿನ ಇವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎನ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 96 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಪೂರ್ವತಯಾರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು.

## ಮೈಸೂರು ವಿಭಾಗ

# "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು** : ಮೈಸೂರು ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರಿಗೆ "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 19.05.2021 ಬುಧವಾರ ಬೆಳಿಗ್ಗೆ 10:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಸದಾಶಿವ ಶೆಟ್ಟಿ, ಮಾನ್ಯ ವೃತ್ತಿಪರ ನಿರ್ದೇಶಕರು ಇವರು ಮುಖ್ಯ ಅಥಿತಿಗಳ ಭಾಷಣ ಮಾಡಿದರು. ನಂತರ ಶ್ರೀ ಹೆಚ್.ಎಸ್. ನಾಗರಾಜಯ್ಯ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು ಇವರು ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 55 ಸೌಹಾರ್ದ ಸಹಕಾರಿಗಳಿಂದ 86 ಪ್ರತಿನಿಧಿಗಳು ಭಾಗವಹಿಸಿದ್ದರು.

## ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳು ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು :** ದಿನಾಂಕ 05.05.2021 ರಂದು ಮೈಸೂರು ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ ಬೆಳಿಗ್ಗೆ 11:00 ರಿಂದ 01:00ರವರೆಗೆ "ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಸಿದ್ಧತೆ" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ ರವೀಂದ್ರನಾಥ್, ಮಾನ್ಯ ಲೆಕ್ಕಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 77 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

**ಹಾಸನ ಮತ್ತು ಚಿಕ್ಕಮಗಳೂರು :** ದಿನಾಂಕ 07.05.2021 ರಂದು ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಬೆಳಿಗ್ಗೆ 11:00 ರಿಂದ 01:00 ರವರೆಗೆ "ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳು" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ್ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನೆ ಇಲಾಖೆ, ಮುಧೋಳ, ಇವರು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 56 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ :** ದಿನಾಂಕ 08.05.2021 ರಂದು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಬೆಳಿಗ್ಗೆ 11:00 ರಿಂದ 01:00 ರವರೆಗೆ "ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳು" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್ ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ. ಎಸ್.ಎ ಸಿದ್ಧಾಂತಿ, ಮಾನ್ಯ ನಿವೃತ್ತ ನಿರ್ದೇಶಕರು, ಆರ್‌ಐಸಿಎಂ, ಬೆಂಗಳೂರು, ಇವರು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 159 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

**ಉಡುಪಿ :** ದಿನಾಂಕ 08.05.2021 ರಂದು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಬೆಳಿಗ್ಗೆ 11:00 ರಿಂದ 01:00 ರವರೆಗೆ "ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯ ಪೂರಕ ದಾಖಲೆಗಳ ತಯಾರಿಸುವ ವಿಧಾನಗಳು" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್ ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ್ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನೆ ಇಲಾಖೆ, ಮುಧೋಳ, ಇವರು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 134 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

**ಮಂಡ್ಯ ಮತ್ತು ಚಾಮರಾಜನಗರ :** ದಿನಾಂಕ 10.05.2021 ರಂದು ಮಂಡ್ಯ ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗೆ 'ಲೆಕ್ಕಪರಿಶೋಧನೆ ವರದಿ ಸಿದ್ದತೆ, ಪೂರ್ವಭಾವಿ ತಯಾರಿ ಮತ್ತು ಜಿ.ಎಸ್.ಟಿ' ವಿಷಯಗಳ ಕುರಿತು 'ವೀಡಿಯೋ ಕಾನ್ಫರೆನ್ಸ್' ಮೂಲಕ ತರಬೇತಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಒಟ್ಟು 48 ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ತರಬೇತಿ ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ದಿ. ಆರ್.ಎನ್ ದೇಶಪಾಂಡೆ ರವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಒಂದು ನಿಮಿಷದ ಮೌನ ಸಂತಾಪ ಸೂಚಿಸಲಾಯಿತು. ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ . ಎಸ್.ಕೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿ ಅಧ್ಯಕ್ಷೀಯ ನುಡಿಗಳನ್ನು ನುಡಿದರು. 'ಲೆಕ್ಕಪರಿಶೋಧನೆ ವರದಿ ಸಿದ್ದತೆ, ಪೂರ್ವಭಾವಿ ತಯಾರಿ ಮತ್ತು ಜಿ.ಎಸ್.ಟಿ' ವಿಷಯದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಕೆ. ಕೇಶವ ಡೋಂಗ್ರೆ, ಸನ್ನದು ಲೆಕ್ಕಪರಿಶೋಧಕರು, ಮೈಸೂರು ಇವರು ಮಾರ್ಗದರ್ಶನ ಮಾಡಿದರು. ನಂತರದಲ್ಲಿ ಪ್ರತಿನಿಧಿಗಳ ಕೇಳಿದ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ಸಹಿತ ಉತ್ತರಗಳನ್ನು ನೀಡಿದರು. ಚಂದ್ರಶೇಖರಯ್ಯ .ಎಂ, ಜಿಲ್ಲಾ ಸಂಯೋಜಕರು ಸಭೆಯನ್ನು ನಿರ್ವಹಿಸಿ ವಂದನಾರ್ಪಣೆ ಮಾಡಿದರು. ತರಬೇತಿ ವಿಭಾಗದಿಂದ ಶ್ರೀಮತಿ ರೇಣುಕಾ ತರಬೇತಿಯನ್ನು ನಿರ್ವಹಣೆ ಮಾಡಿದರು.

## "ಸಹಕಾರಿಗಳ ಇತರೇ ಆದಾಯೋತ್ಪನ್ನ ಚಟುವಟಿಕೆಗಳು ಮತ್ತು ಸಹಕಾರಿ ನಾಯಕತ್ವದ ಗುಣಲಕ್ಷಣಗಳು" ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮ

**ಮಂಡ್ಯ ಮತ್ತು ಚಾಮರಾಜನಗರ :** ದಿನಾಂಕ 21.05.2021ರಂದು ಮಂಡ್ಯ ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗೆ 'ಸಹಕಾರಿಗಳ ಇತರೇ ಆದಾಯೋತ್ಪನ್ನ ಚಟುವಟಿಕೆಗಳು ಮತ್ತು ಸಹಕಾರಿ ನಾಯಕತ್ವದ ಗುಣಲಕ್ಷಣಗಳು' ವಿಷಯಗಳ ಕುರಿತು 'ವೀಡಿಯೋ ಕಾನ್ಫೆರೆನ್ಸ್' ಮೂಲಕ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಒಟ್ಟು 45 ಪ್ರತಿನಿಧಿಗಳು ಭಾಗವಹಿಸಿದ್ದರು.

ಸದರಿ ತರಬೇತಿ ಕಾರ್ಯಕ್ರಮದ ಪ್ರಾರಂಭದಲ್ಲಿ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ, ಎಸ್. ಕೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿ ಅಧ್ಯಕ್ಷೀಯ ನುಡಿಗಳನ್ನು ನುಡಿದರು. 'ಸಹಕಾರಿಗಳ ಇತರೇ ಆದಾಯೋತ್ಪನ್ನ ಚಟುವಟಿಕೆಗಳು ಮತ್ತು ಸಹಕಾರಿ ನಾಯಕತ್ವದ ಗುಣಲಕ್ಷಣಗಳು' ವಿಷಯದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಚಿನ್ನಸ್ವಾಮಿ .ಬಿ, ಹಿರಿಯ ತರಬೇತಿದಾರರು(ನಿ), ಜೆ.ಎಸ್.ಎಸ್ ರುಡ್‌ಸೆಟ್ ತರಬೇತಿ ಕೇಂದ್ರ, ಚಾಮರಾಜನಗರ ಇವರು ಕೆಲವೊಂದು ಪಿಪಿಟಿ ದೃಶ್ಯಗಳ ಮೂಲಕ ಮಾರ್ಗದರ್ಶನ ಮಾಡಿದರು. ನಂತರದಲ್ಲಿ ಪ್ರತಿನಿಧಿಗಳ ಕೇಳಿದ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ಸಹಿತ ಉತ್ತರಗಳನ್ನು ನೀಡಿದರು. ಚಂದ್ರಶೇಖರಯ್ಯ .ಎಂ, ಜಿಲ್ಲಾ ಸಂಯೋಜಕರು ಸಭೆಯನ್ನು ನಿರ್ವಹಿಸಿ ವಂದನಾರ್ಪಣೆ ಮಾಡಿದರು. ತರಬೇತಿ ವಿಭಾಗದಿಂದ ಶ್ರೀಮತಿ ರೇಣುಕಾ ತಾಂತ್ರಿಕ ನಿರ್ವಹಣೆ ಮಾಡಿದರು.

### ಬೆಂಗಳೂರು ವಿಭಾಗ

## "ಸಾಲ ವಸೂಲಾತಿ" ಕುರಿತು ತರಬೇತಿ ಕಾರ್ಯಕ್ರಮ

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ :** ದಿನಾಂಕ 20.05.2021 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗಾಗಿ "ಸಾಲ ವಸೂಲಾತಿ" ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡುರಾವ್ ರವರು ಉಪಸ್ಥಿತರಿದ್ದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಹಾಗೂ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೊರಟಕರ್ ರವರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕಾರಾದ ರಾಜೇಶ್ ಕೆ.ಎಂ ಹಾಗೂ ಅನಿಲ್ ಕುಮಾರ್ ಎಂ ಭಾಗವಹಿಸಿದ್ದರು.

ತರಬೇತಿಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ 151 ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ಚಿತ್ರದುರ್ಗ ಮತ್ತು ದಾವಣಗೆರೆ :** ದಿನಾಂಕ 20.05.2021ರಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ "ಕೊರೋನ ಸಂದರ್ಭದಲ್ಲಿ ಸಹಕಾರಿಗಳ ಕಾರ್ಯನಿರ್ವಹಣೆ " ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು.ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ, ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ರವರು ಉಪಸ್ಥಿತರಿದ್ದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ನಡೆಸಿಕೊಟ್ಟರು. ಜಿಲ್ಲಾ ಸಂಯೋಜಕರಾದ ನಟರಾಜ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಉಪನ್ಯಾಸವನ್ನು ಶ್ರೀ ಬಿ.ವಿ ರವೀಂದ್ರನಾಥ್, ಲೆಕ್ಕಪರಿಶೋಧಕರು, ಸಾಗರ ಇವರು ನಡೆಸಿಕೊಟ್ಟರು.

ತರಬೇತಿಯಲ್ಲಿ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ 86 ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## ಸಮಾಲೋಚನಾ ಸಭೆ

**ಶಿವಮೊಗ್ಗ :** ದಿನಾಂಕ 11.05.2021 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ ಜೊತೆ ಮಾನ್ಯ ಉಪನಿಬಂಧಕರು ಸಹಕಾರಿಗಳ ಸಿಬ್ಬಂದಿಗಳಗೆ ಪಾಸ್ ನೀಡಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಸಮಾಲೋಚನಾ ಸಭೆ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್, ಮಾನ್ಯ ವ್ಯವಸ್ತಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಉಪಸ್ಥಿತರಿದ್ದರು.

## ದಾವಾ ದಾಖಲಾತಿ ವಿಧಾನ ಹಾಗೂ ಅವಶ್ಯವಿರುವ ದಾಖಲೆಗಳು ವಿಷಯದ ಕುರಿತು ತರಬೇತಿ ಕಾರ್ಯಕ್ರಮ

**ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 07.05.2021 ರಂದು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ದಾವಾ ದಾಖಲಾತಿ ವಿಧಾನ ಹಾಗೂ ಅವಶ್ಯವಿರುವ ದಾಖಲೆಗಳು ವಿಷಯದ ಆನ್‌ಲೈನ್ ಮುಖಾಂತರ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸದರಿ ತರಬೇತಿಯಲ್ಲಿ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಬಿ.ಎಸ್ ಗುಂಡುರಾವ್, ಮಾನ್ಯ ನಿರ್ದೇಶಕರು. ಸಂಯುಕ್ತ ಸಹಕಾರಿ, ಬೆಂಗಳೂರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಪ್ರಾಂತೀಯ ವ್ಯವಸ್ಥಾಪಕರು ಭಾಗವಹಿಸಿದ್ದರು. ಉಪನ್ಯಾಸ ಕಾರ್ಯಕ್ರಮವನ್ನು ವೈ.ಸಿ ಸುರೇಶ್, ವಕೀಲರು, ಬೆಂಗಳೂರು ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 160 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ. ಎಂ ಹಾಗೂ ಅನಿಲ್ ಕುಮಾರ್ ಎಂ. ಇವರು ಭಾಗವಹಿಸಿದ್ದರು.

## ಕೊರೋನ ಸಮಯದಲ್ಲಿ ಸೌಹಾರ್ದ ಸಹಕಾರಿಗಳ ಆರ್ಥಿಕ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 15.05.2021 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗೆ ಆನ್‌ಲೈನ್ ಮುಖಾಂತರ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ 100 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕೊರೋನ ಸಮಯದಲ್ಲಿ ಸೌಹಾರ್ದ ಸಹಕಾರಿಗಳ ಆರ್ಥಿಕ ನಿರ್ವಹಣೆ ಕುರಿತು ಉಪನ್ಯಾಸವನ್ನು ಶ್ರೀ ಮಧುಕರ್ ಹೆಗಡೆ, ಸನ್ನದ್ದು ಲೆಕ್ಕಪರಿಶೋಧಕರು, ಶಿವಮೊಗ್ಗ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪ್ರಸನ್ನಕುಮಾರ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು. ಶ್ರೀ ನಾರಾಯಣ ಹೆಗಡೆ ಪ್ರಾಂತೀಯ ಅಧಿಕಾರಿಗಳು, ಸಂಯುಕ್ತ ಸಹಕಾರಿ, ಬೆಂಗಳೂರು. ಇವರು ಭಾಗವಹಿಸಿದ್ದರು. ಸ್ವಾಗತ ಕಾರ್ಯಕ್ರಮವನ್ನು ಶ್ರೀ ಸಂಜಯ ಕೋರಟಕರ ರವರು ನಡೆಸಿಕೊಟ್ಟರು. ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ನೆರವೇರಿಸಿದರು.

## "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪರಿಶೋಧನ ಸಿದ್ಧತೆ" ಕುರಿತು ತರಬೇತಿ ಕಾರ್ಯಕ್ರಮ

**ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು :** ದಿನಾಂಕ 12.05.2021 ರಂದು ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪರಿಶೋಧನ ಸಿದ್ಧತೆ" ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತದ ವತಿಯಿಂದ "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪರಿಶೋಧನ ಸಿದ್ಧತೆ" ವಿಷಯದ ಕುರಿತು ಆನ್ ಲೈನ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಸಂಜಯ್ ಕೊರಟಕರ್, ಕಾನೂನು ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ, ಬೆಂಗಳೂರು ಪ್ರಾಂತ ಇವರು ಪ್ರಾಸ್ತಾವಿಕ ಭಾಷಣ ಮಾಡಿದರು. ಉಪನ್ಯಾಸ ಕಾರ್ಯಕ್ರಮವನ್ನು ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು, ಸಾಗರ. ಇವರು ನಡೆಸಿಕೊಟ್ಟರು. ಶ್ರೀ ನಾರಾಯಣ ಹೆಗಡೆ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ ಇವರು ಉಪಸ್ಥಿತರಿದ್ದರು. ಜಿಲ್ಲಾ ಸೋಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಹಾಗೂ ಕುಶಾಲ್ ಹೆಚ್. ಎಂ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 90 ಪ್ರತಿನಿದಿಗಳು ಭಾಗವಹಿಸಿದ್ದರು.

## ಆರೋಗ್ಯ ವಿಮೆ ಕುರಿತು ಸಭೆ

**ಶಿವಮೊಗ್ಗ :** ದಿನಾಂಕ 18.05.2021 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು / ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ "ಆರೋಗ್ಯ ವಿಮೆ" ಮಾಡಿಸುವುದರ ಕುರಿತು ಹಾಗೂ ಸರ್ಕಾರದ ನಿರ್ದೇಶನದಂತೆ ಕೊರೋನ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಸರ್ಕಾರಕ್ಕೆ ಸಹಾಯಧನ ನೀಡುವ ಕುರಿತು ಆನ್ ಲೈನ್ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್ ಇವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಉಪಸ್ಥಿತರಿದ್ದರು.

ಕಲಬುರಗಿ ವಿಭಾಗ

## ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಾಗೂ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಕುರಿತು ತರಬೇತಿ ಕಾರ್ಯಕ್ರಮ

**ಬೀದರ ಮತ್ತು ಯಾದಗಿರಿ ಜಿಲ್ಲೆ :** ದಿನಾಂಕ 07.05.2021 ರಂದು ಕಲಬುರಗಿ ಪ್ರಾಂತದ ಬೀದರ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ "ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಾಗೂ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಕುರಿತು" ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ಇವರು ದೀಪ ಬೆಳಗಿಸುವ ಮೂಲಕ ನೇರವೆರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನುಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ 79 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ವೀರಶೆಟ್ಟಿ ಕೆ ಜಿಲ್ಲಾ ಸಂಯೋಜಕರು ನೇರವೆರಿಸಿದರು.

**ಕೊಪ್ಪಳ ಜಿಲ್ಲೆ :** ದಿನಾಂಕ 12.05.2021 ರಂದು ಕಲಬುರಗಿ ಪ್ರಾಂತದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ "ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಲೆಕ್ಕಪತ್ರಗಳ ನಿರ್ವಹಣೆಯ ಕುರಿತು ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನುಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ ರವೀಂದ್ರನಾಥ, ಸನ್ನದು ಲೆಕ್ಕರಿಶೋಧಕರು ಸಾಗರ ಶಿವಮೊಗ್ಗ ಜಿಲ್ಲೆ ಇವರು ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ 110 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಪವನ ಎಮ್ ಆರ್ ಜಿಲ್ಲಾ ಸಂಯೋಜಕರು ನೇರೆವರಿಸಿದರು.

**ಕಲಬುರಗಿ ಜಿಲ್ಲೆ :** ದಿನಾಂಕ 17.05.2021 ರಂದು ಕಲಬುರಗಿ ಪ್ರಾಂತದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ "ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಲೆಕ್ಕಪತ್ರಗಳ ನಿರ್ವಹಣೆಯ ಕುರಿತು" ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ನುಡಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನೆರವರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ. ವಿ ರವೀಂದ್ರನಾಥ ಸನ್ನದು ಲೆಕ್ಕರಿಶೋಧಕರು ಸಾಗರ ಶಿವಮೊಗ್ಗ, ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 85 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್ ಪಾಟೀಲರವರು ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಓಂಕಾರ ಧರಣೆ ಜಿಲ್ಲಾ ಸಂಯೋಜಕರು ನೇರೆವರಿಸಿದರು.

## "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು" ತರಬೇತಿ ಕಾರ್ಯಕ್ರಮ

**ಬಳ್ಳಾರಿ ಜಿಲ್ಲೆ :** ದಿನಾಂಕ 10.05.2021 ರಂದು ಕಲಬುರಗಿ ಪ್ರಾಂತದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು" ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನುಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸುನಿಲ ಪತ್ತಾರ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಮುಧೋಳ, ಬಾಗಲಕೋಟ್ ಜಿಲ್ಲೆ ಇವರು ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 38 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯನಗರ ಜಿಲ್ಲೆ :** ದಿನಾಂಕ 11.05.2021 ರಂದು ಕಲಬುರಗಿ ಪ್ರಾಂತದ ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು". ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ

ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನುಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸುನಿಲ ಪತ್ತಾರ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಮುಧೋಳ, ಬಾಗಲಕೋಟ ಜಿಲ್ಲೆ ಇವರು ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 53 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ರವಿಕೂಮಾರ ಜಿಲ್ಲಾ ಸಂಯೋಜಕರು ನೇರೆವರಿಸಿದರು.

## ಆಡಳಿತ ಮಂಡಳಿ ಸಭೆ ಜರುಗಿಸುವ ಮತ್ತು ವಾರ್ಷಿಕ ಸಾಮಾನ್ಯ ಸಭೆ / ನಡವಳಿ ದಾಖಲಿಸುವ ಕುರಿತು ತರಬೇತಿ ಕಾರ್ಯಕ್ರಮ

**ರಾಯಚೂರು ಮತ್ತು ಯಾದಗಿರಿ ಜಿಲ್ಲೆ :** ದಿನಾಂಕ 20.05.2021 ರಂದು ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ "ಆಡಳಿತ ಮಂಡಳಿ ಸಭೆ ಜರುಗಿಸುವ ಮತ್ತು ವಾರ್ಷಿಕ ಸಾಮಾನ್ಯ ಸಭೆ /ನಡವಳಿ ದಾಖಲಿಸುವ "ಕುರಿತು ತರಬೇತಿಯನ್ನು ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ವಹಿಸಿದ್ದರು. ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ರಾಜಶೇಖರ ರವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರು, ಪ್ರಸ್ತುತ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಇವರು ಆಗಮಿಸಿ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನೆರವೆರಿಸಿದರು. ಸ್ವಾಗತವನ್ನು ರಾಯಚೂರು ಜಿಲ್ಲಾ ಸಂಯೋಜ–ಕರಾದ ಶ್ರೀ ವೆಂಕಟೇಶ ರಾಠೋಡವರರು ಮಾಡಿದರು, ವಂದನಾರ್ಪಣೆಯನ್ನು ಬೀದರ ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಕೆ ಇವರು ನೆರವರಿಸಿದರು. ತರಬೇತಿಯಲ್ಲಿ 156 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೊಪ್ಪಳ :** ದಿನಾಂಕ 28.05.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕ–ರಿಗಾಗಿ ಗೋ ಟು ಮೀಟಿಂಗ್‌ನ ಮೂಲಕ " ಆಡಳಿತ ಮಂಡಳಿಯ ಸಭೆ ಜರುಗಿಸುವುದು/ ವಿಷಯಗಳು/ಟಿಪ್ಪಣಿಗಳ ಬಗ್ಗೆ" ಎಂಬ ವಿಷಯದ ಕುರಿತು ಆನ್‌ಲೈನ್‌ನಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ನೇರವೇರಿಸಿದರು. ಕಾರ್ಯಕ್ರಮ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ.ಹಿರೇಮಠ ರವರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಪ್ರಾಂತದ ಮಾನ್ಯ ಜಂಟಿ ನಿಬಂಧಕರಾದ ಶ್ರೀ ಗೋಪಾಲ ಚವ್ಹಾಣ, ಕೊಪ್ಪಳ ಜಿಲ್ಲೆಯ ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಬಿ.ಎ ಕೇಸರಿಮಠ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ನೆರವೇರಿಸಿದರು. ನಿರೂಪಣೆ ಮತ್ತು ವಂದನರ್ಾಪಣೆಯನ್ನು ಕೊಪ್ಪಳ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ನೆರವೇರಿಸಿದರು. ಒಟ್ಟು 110 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಯಲ್ಲಿನ ಇತ್ತೀಚಿನ ಬದಲಾವಣೆಗಳ ಕುರಿತು ತರಬೇತಿ ಕಾರ್ಯಕ್ರಮ

**ಕೊಪ್ಪಳ ಜಿಲ್ಲೆ :** ದಿನಾಂಕ 21.05.2021 ರಂದು ಕಲಬುರಗಿ ಪ್ರಾಂತದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಯಲ್ಲಿನ ಇತ್ತೀಚಿನ ಬದಲಾವಣೆಗಳು" ಕುರಿತು ತರಬೇತಿಯನ್ನು ಆನ್‌ಲೈನ್ ಗೋ ಟು ಮೀಟಿಂಗ್ ಆಪ್‌ನ ಮೂಲಕ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಘನ ಉಪಸ್ಥಿತಿಯನ್ನು ವಹಿಸಿದ್ದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನೇರವೆರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ. ವಿ ರವೀಂದ್ರನಾಥ ಸನ್ನದು ಲೆಕ್ಕರಿಶೋಧಕರು, ಸಾಗರ ಶಿವಮೊಗ್ಗ, ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪವನ ಎಮ್ ಆರ್ ಜಿಲ್ಲಾ ಸಂಯೋಜಕರು ನೇರೆವರಿಸಿದರು. ತರಬೇತಿಯಲ್ಲಿ 130 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿಯ ಕಾರ್ಯಕ್ರಮಗಳ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳ ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಶ್ರೀದೇವಿ ನಿರ್ವಹಿಸಿದರು.

# ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ (ಡಿಸಿಸಿಬಿ) ರಾಜ್ಯ ಸಹಕಾರ ಬ್ಯಾಂಕ್ (ಎಸ್‌ಟಿಸಿಬಿ) ಯೊಂದಿಗೆ ಸಂಯೋಜನೆಯ ಮಾರ್ಗಸೂಚಿ

भारतीय रिज़र्व बैंक
RESERVE BANK OF INDIA
www.rbi.org.in

RBI/2021-22/42
DOR.RUR.REC.No.17/19.51.007/2021-22 May 24, 2021

All State and Central Cooperative Banks

Dear Sir/ Madam,

**Amalgamation of District Central Co-operative Banks (DCCBs) with the State Co-operative Bank (StCB) - Guidelines**

The Banking Regulation (Amendment) Act, 2020 (39 of 2020) has been notified for the State Co-operative Banks (StCBs) and District Central Co-operative Banks (DCCBs) with effect from, April 1, 2021 vide Notification dated December 23, 2020 issued by Government of India. With the issue of the notification, the amalgamations of the above banks have to be sanctioned by Reserve Bank of India in terms of the provisions of the Section 44-A read with Section 56 of the Banking Regulation Act, 1949.

In recent past, a few State Governments approached RBI for amalgamation of DCCBs with the StCB as a two-tier Short-term Co-operative Credit Structure (STCCS). In order to help the States contemplating delayering their STCCS, following guidelines are being issued to bring the requirements and indicative benchmarks for the amalgamation of DCCBs with the StCB to the notice of all stakeholders. These guidelines will also apply for amalgamation of one or more DCCBs in a State with the StCB or amalgamation of one DCCB with another.

2. The Reserve Bank of India will consider proposals for amalgamation if the following conditions are fulfilled:

i. When the State Government of the State makes a proposal to amalgamate one or more DCCB/s in the State with the StCB after conducting a detailed study of the legal framework along with additional capital infusion strategy, assurance regarding financial support if required, projected business model with clear profitability and proposed governance model for the amalgamated bank.

ii. When the scheme of amalgamation is approved by the requisite majority of shareholders in accordance with the provisions of Section 44A read with Section 56 of the Banking Regulation Act, 1949.

iii. When such proposal of the State Government has been examined and recommended by NABARD.

3. The proposal for amalgamation of DCCBs with the StCB will be examined by Reserve Bank in consultation with NABARD and the sanction/ approval will be a two-stage process. In the first stage, an 'in-principle' approval will be accorded subject to fulfilment of certain conditions, following which the processes for amalgamation may be initiated by all concerned. After completion of the above processes, NABARD and Reserve Bank may be approached for final approval along with compliance report. To enable the Reserve Bank to consider the application for sanction, the State Government shall submit the information and documents specified in the Annex to the concerned Regional Office of Reserve Bank and NABARD.

**Regulatory Criteria**

4. The basic regulatory criteria for amalgamation shall be as under:

a. The proposal should be in compliance with the legal requirements, past orders/ rulings of the Courts, if any. The State Government shall verify that there are no Court Orders prohibiting or staying the proposal for amalgamation.
b. Financial parameters of the amalgamated entity based on notionally consolidated latest audited financial statements should be robust. It should have its CRAR above the prescribed regulatory minimum, Gross NPA below 7% and Net NPA below 5% and availability of adequate liquid assets. Post-amalgamation, it should be a profit making and financially viable entity on sustained basis.
c. The StCB should have a satisfactory track record of regulatory and supervisory compliance.
d. The StCB should have strong governance/ management practices.

**General considerations governing the In-principle Approval**

5. The general considerations governing the in-principle approval by RBI shall be as under:

a. The scheme of amalgamation shall be presented to the shareholders of the StCB/ DCCBs. A resolution shall be passed by 2/3rd of the majority of the shareholders, both in number and value, present and voting at a General Body Meeting of StCB and each DCCB as required under section 44(A) read with section 56 of the Banking Regulation Act, 1949.
b. An MOU shall be executed by the constituents i.e. amalgamating DCCBs, StCB and State Government covering issues of governance structure, management,

2

manpower/HR issues and the manner of arriving at the share swap ratio based on the net worth of DCCBs (Networth of the StCB/ DCCB to be computed as per the guidelines issued by NABARD in circular NB.DoS.HO.POL/2069/J-1/2012-13 Circular No.211/DoS 28/2012 dated August 24, 2012 and other circulars issued from time to time) which are proposed to be amalgamated with the StCB. A copy of the MOU shall be submitted to RBI / NABARD.

c. Due diligence on the amalgamating entities shall be carried out by Chartered Accountants. Shares in the amalgamated entity will be allotted on the basis of the net worth of the amalgamating banks. Share swap ratios for allotment of shares will be required to be worked out on the basis of valuation of assets and liabilities done by a chartered accountant firm registered with IBBI as valuers.

d. If as a result of share swap ratio based on net worth, shareholders of some DCCBs cannot be allotted any shares, the State Government shall infuse sufficient capital in such DCCBs to ensure that the shareholders of such DCCBs are allotted at least one share each.

e. In addition to compliance with extant income recognition, asset classification and provisioning norms, full provision shall be made for impairment of assets, if any, on account of frauds, misappropriation etc. while arriving at the value of net assets of the amalgamating banks.

f. The StCB, post-amalgamation, shall be required to adhere to the CRAR norms prescribed by RBI from time to time. The shortfall in capital, if required, for meeting CRAR requirement shall be met by State Government on an ongoing basis.

g. The StCB, post-amalgamation, shall meet with the regulatory requirements laid down for grant of various permissions/approvals given to the amalgamating banks so that none of the services currently extended by the banks under amalgamation get jeopardized. The required regulatory approvals for the said services shall be obtained, if required, before the amalgamated entity commences operations. In case the StCB is not eligible to continue with certain lines of business which the amalgamating banks have been permitted, such lines of business shall be phased-out non-disruptively within one year of grant of final approval.

h. StCB shall ensure to appropriately configure its IT system to enable system integration with all DCCBs before applying for final approval. The migration audit on IT systems of all the DCCBs shall be completed before the amalgamation. System integrity shall be established and certified before the DCCBs can migrate onto the StCB platform.

i. A new Board of the amalgamated bank shall be constituted within three months of amalgamation. The MD/ CEO who is to be appointed should meet the Fit & Proper criteria prescribed by RBI.

j. In addition to the Board of Directors, a Board of Management (BoM) shall be set up for the StCB within three months of amalgamation as prescribed in terms of the circular DoR(PCB).BPD.Cir.No.8/12.05.002/2019-20 dated December 31, 2019 addressed to Urban Co-operative banks. For this purpose, the bye-laws of the StCB shall be amended for incorporating the provisions relating to guidelines on BoM issued by RBI.

k. The banking licence issued to the StCB shall continue after the process of amalgamation. DCCBs which are being amalgamated into the StCB shall surrender their licences to RBI. The process of surrendering licences shall be completed within three months of amalgamation.

l. Existing branches of the DCCBs shall be converted into branches of the StCB and will come under the purview of Section 23 of the BR Act, 1949 (AACS). Thus, the StCB will be required to apply for branch licence from RBI for all these existing branches of DCCBs within three months from the date of amalgamation. The StCB shall also seek prior approval of RBI for shifting of branches and opening of any new place of business including controlling offices. The granting of permission by RBI for shifting of branches/ opening of any new place of business shall be in accordance with the extant guidelines.

m. DICGC clearance for the amalgamation shall be obtained by the StCB before applying for final approval.

n. In case of divergence in interest rates offered on deposits by the StCB and the amalgamating DCCBs, the StCB shall provide sufficient notice period to the customers of DCCBs to enable them to take a decision with regard to continuing their deposits with the amalgamating bank. Depositors deciding to discontinue their deposits within the aforesaid notice period will not be levied any penalty for such premature withdrawal

o. RBI may prescribe any additional condition/s, as may be considered necessary.

p. The proposals for amalgamation which meet the indicative benchmarks would be evaluated by NABARD and RBI on merits and would be subject to additional requirements/ conditions as deemed fit.

6. The assets and liabilities of the transferor DCCBs will be transferred to StCB on the date of the amalgamation as advised by Reserve Bank while according final approval for the amalgamation.

**Post- amalgamation requirements**

7. Post-amalgamation, the StCB will be required to take the following action:

a. A compliance report with reference to the conditions of the final approval for amalgamation shall be submitted within the prescribed timeframe.

b. Licences of the transferor banks shall be surrendered. Applications for issue of branch licences shall be made by StCB within the given time frame as per the conditions of amalgamation.

c. Steps initiated by the authority / institution responsible for settlement of claims of the transferor banks and their members in respect of allotment of shares shall be indicated. Details of the list of pending claims and the time frame to settle such claims should also be indicated.

**Disclosures**

8. The amalgamated entity shall make disclosures in its first annual accounts post-amalgamation as mentioned below. These disclosures shall continue in the subsequent annual accounts till they are resolved/ closed with concurrence of the Statutory Auditors:

a. Pension liabilities pre and post-amalgamation. The methodology of valuation/ re-valuation of the pension liabilities shall be disclosed with details of the increase/ reduction in liabilities as a result of change in pension scheme, if any. This disclosure shall capture details of changes, if any, in pension schemes that are made applicable to the employees of amalgamating banks/ amalgamated bank.

b. Status of vigilance cases and complaints pending in the amalgamating banks as on the date of amalgamation and details of cases that are closed during the year.

c. Status of pending fraud cases, outstanding inter-bank adjustments (amalgamating/amalgamated) and inter-branch accounts and other intermediary accounts post–merger and their impact on the financial statements of the amalgamated bank.

d. Outstanding claims of the amalgamating banks and their members in respect of allotment of shares and time frame for settlement of such claims.

e. Such additional disclosures that may be required by the regulator/ supervisor

Yours faithfully

(Neeraj Nigam)
Chief General Manager in Charge

Annex

**Documents to be furnished to the RBI and NABARD along with the Proposal**

I. **Documents to comply with the Regulatory requirements**:

a) Feasibility Study.

b) Formal approval of the State Government.

c) Draft Scheme of Amalgamation along with duly certified resolution passed by the shareholders.

**II. Managerial and Governance:**

a) Copies of the notices of every meeting of the shareholders called for such approval together with newspaper cuttings evidencing that notices of the meetings were published in newspapers at least once a week for three consecutive weeks in two newspapers circulating in the locality or localities in which the registered offices of the banks are situated and that one of the newspapers was in a language commonly understood in the locality or localities.

b) Certificates signed by each of the officers presiding at the meeting of shareholders certifying the following

i. A copy of the resolution passed at the meeting;

ii. The number of shareholders present at the meeting

iii. The number of shareholders who voted in favour of the resolution and the aggregate value of the shares held by them

iv. The number of shareholders who voted against the resolution and the aggregate value of the shares held by them

v. The number of shareholders whose votes were declared as invalid and the aggregate value of the shares held by them

vi. The names of shareholders who have given notice in writing to the Presiding Officer that they dissented from the scheme of amalgamation together with the number of shares held by each of them.

c) Proposed governance reforms enabling professional governance/ management in the amalgamated bank.

**III. Financials:**

a) Audited Financial position of all the banks proposed to be amalgamated for preceding two financial years.

b) Financial structure of the amalgamated entity post-merger.

c) Areas of operational synergies and cost management.

1

d) Due-diligence Report (DDR) from Chartered Accountants, which may generally include:

   i. Scope/Mandate of DDR
   ii. Sources of information used and limitations, if any, due to incomplete/not available data/information
   iii. Nature of business being undertaken including Foreign Exchange Business such as Authorized Dealer (Category 1 or 2), Bharat Bill Payment system (BBPS), Electronic Banking Channels etc.
   iv. Share capital and share holding pattern
   v. Management structure and organisational chart of holding Membership
   vi. Accounting policies/practices and software in use
   vii. Agreements, contracts and insurance in place
   viii. Legal cases - by and against the bank
   ix. Statutory liability assessment and compliance (IT, PF, TDS, etc); penalty imposed if any
   x. Liability particulars (deposits, to staff, others) and contingent liabilities details
   xi. Asset particulars along with its actual IRAC status as per RBI guidelines/ fixed assets-valuation method, other assets
   xii. Contra items
   xiii. Off balance sheet items and contingent liabilities, if any
   xiv. Review of net assets and net liability including realisable value
   xv. Independent study of assets and pointers on erosion in assets, under provisioning (e.g. on gratuity, leave encashment, income tax, depreciation, stamp duty, etc.), understatement of liability (e.g. non-recognition of interest liability on matured term deposits, etc.) and factoring these into net worth calculation
   xvi. Non-banking assets, if any
   xvii. Net worth statement
   xviii. Details of property owned and leased with market value.
   xix. Loans etc. to Directors
   xx. Any signs of possible frauds or financial malfeasance.

e) Report of the valuers appointed for determination of the swap ratio.

**IV. Disclosures:**

a. Pension liabilities pre-amalgamation. The methodology of valuation/ re-valuation of the pension liabilities shall be disclosed with details of the increase/ reduction in liabilities as a result of change in pension scheme, if any. This disclosure shall capture details of changes, if any, in pension schemes that will be made applicable to the employees of amalgamating banks/ amalgamated bank.

b. Status of vigilance cases and complaints pending in the amalgamating banks as on the date of application/proposal.

c. Status of pending fraud cases, outstanding inter-bank adjustments and inter-branch accounts and other intermediary accounts pre–merger.

**V. Other Documents:**

Additional information relevant for the consideration of the scheme of amalgamation.

# ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ - ಪ್ರಾಮುಖ್ಯತೆ

– ಶ್ರೀ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಸಹಕಾರ ಸಂಘ/ಸಹಕಾರಿಗಳು ಆರ್ಥಿಕ ವರ್ಷ ಮುಗಿದ ಒಂದು ತಿಂಗಳು (ಏಪ್ರಿಲ್) ಒಳಗೆ ತನ್ನ ಅಂತಿಮ ಲೆಕ್ಕಗಳನ್ನು ಸಿದ್ದಪಡಿಸತಕ್ಕದ್ದು, ಶಾಸನಬದ್ಧ ಅಗತ್ಯತೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63, ಸಹಕಾರ ಸಂಘಗಳ ನಿಯಮ 60ರ ಸಂ.29 ರಿಂದ 30ಎ ಮತ್ತು ಸಹಕಾರ ಸಂಘಗಳ ಅದಿನಿಯಮ 1997 ಕಲಂ33, ನಿಯಮ 2004 ಸಂ. 8 ರಿಂದ 10 ರವರೆಗೆ ಲೆಕ್ಕಪರಿಶೋಧನೆ ಮತ್ತು ವಿಧಿ ವಿಧಾನಗಳ ಬಗ್ಗೆ ತಿಳಿಯಪಡಿಸಲಾಗಿದೆ. ಇದು ಸಹಕಾರ ಸಂಸ್ಥೆಗಳ ಆಸ್ತಿಗಳ ಪರಿಶೀಲನೆಯನ್ನೂ ಒಳಗೊಂಡಿರುತ್ತದೆ. ಇದಕ್ಕೆ ಸಹಕಾರ ಬ್ಯಾಂಕ್‌ಗಳು ಹೊರತಾಗಿರುವುದಿಲ್ಲ. ಇತ್ತೀಚೆಗೆ ಸಹಕಾರ ಬ್ಯಾಂಕ್‌ಗಳಲ್ಲಿ ಆದ ಅನಾಹುತಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿಗೆ ಕಾರಣವಾಗಿ ನಿಯಂತ್ರಣ ಬ್ಯಾಂಕ್ ಆದ ರಿಸರ್ವ್ ಬ್ಯಾಂಕ್ ಹೆಚ್ಚು ನಿಯಂತ್ರಣಗಳನ್ನು ಹೊರಿಸಲು ಸಾಧ್ಯವಾಗಿದೆ. ಈಗ ರಿಸರ್ವ್ ಬ್ಯಾಂಕ್ ಲೆಕ್ಕಪರಿಶೋಧನೆಗೂ ಕೆಲವು ಮಾನದಂಡಗಳನ್ನು ವಿಧಿಸಿರುತ್ತದೆ. (ಎಕನಾಮಿಕ್ ಟೈಮ್ಸ್ ನ ವರದಿ ದಿನಾಂಕ 28–4–2021) ಲೆಕ್ಕಪರಿಶೋಧಕರ ನೇಮಕಾತಿಗೆ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಅಗತ್ಯ. ಆಸ್ತಿಯ ಗಾತ್ರ ರೂ 15,000 ಕೋಟಿ ಮೀರಿದ್ದಲ್ಲಿ ಎರಡು ಲೆಕ್ಕಪರಿಶೋಧಕರು (ಕಂಪನಿ) ಗಳು ಜಂಟಿಯಾಗಿ ಲೆಕ್ಕಪರಿಶೋಧನೆ ನಡೆಸುವುದು ಅಗತ್ಯವಾಗುತ್ತದೆ.

ಇದರ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಅತಿಯಾದ ನಿಯಂತ್ರಣಕ್ಕೆ ಒಳಪಡಲು ಕಾರಣಗಳೇನು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಥೆಗಳ ಚುಕ್ಕಾಣಿ ಹಿಡಿದಿರುವ ಆಡಳಿತ ಮಂಡಳಿಯ ವೈಫಲ್ಯ. ಆಡಳಿತ ಮಂಡಳಿ ತಮ್ಮ ಸಂಸ್ಥೆಯ ಆಗುಹೋಗುಗಳ ಬಗ್ಗೆ ಅಗತ್ಯ ಹಿಮ್ಮಾಹಿತಿ ಪಡೆಯದಿರುವುದು. ಸಕಾಲಿಕ ನಿರ್ಧಾರಗಳು, ಅಗತ್ಯ ಚಿಕಿತ್ಸೆ ಕ್ರಮಗಳನ್ನು ಕೈಗೊಳ್ಳದೇ ಇರುವುದು ಕಾರಣವಾಗಿರುತ್ತದೆ. ಕೆಲವು ಬಾರಿ 'ಬೇಲಿಯೇ ಎದ್ದು ಹೊಲ ಮೇಯುವ' ಪರಿಸ್ಥಿತಿಯಾಗಿರುತ್ತದೆ. ಈ 'ಪರಿಸ್ಥಿತಿ'ಯು 'ಪರಿವೀಕ್ಷಣೆ'ಯಲ್ಲಾಗಲಿ 'ಲೆಕ್ಕಪರಿಶೋಧನೆ'ಯಲ್ಲಾಗಲಿ ಪ್ರತಿಫಲನಗೊಳ್ಳದೇ ಇರುವುದಕ್ಕೆ ಕಾರಣವಾದರೂ ಏನು? ಇದು 'ಅಗೋಚರ' ಪರಿಸ್ಥಿತಿಯಲ್ಲಿ ಹುದುಗಿದ್ದು 'ಗೋಚರ'ವಾಗುವುದಾದರೂ ಯಾವಾಗ ಮತ್ತು ಹೇಗೆ? ಎಂಬುದನ್ನು ಪರಿಶೀಲಿಸ ಬೇಕಾಗಿದೆ.

ವ್ಯವಹಾರದ ಗಾತ್ರ ಅಧಿಕವಿದ್ದು ಲಾಭಗಳಿಕೆ ಕಡಿಮೆ ಇರುವುದು, ಲಾಭ ಗಳಿಸಿದ್ದರೂ ತನ್ನ ಜವಾಬ್ದಾರಿಗಳನ್ನು ತೀರಿಸುವಲ್ಲಿ ಸಂಕಷ್ಟ ಎದುರಿಸುತ್ತಿರುವುದು 'ಡಿವಿಡೆಂಡ್' ಹಂಚಿಕೆ ಮಾಡಲಾಗದಿರುವುದು ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸಲು ಸಾಧ್ಯವಾಗದಿರುವುದು, ಸಾಲಗಾರರಿಗೆ ಸಾಲ ಮರುಪಾವತಿಸಲು ಸಾಧ್ಯವಾಗದಿರುವುದು ವ್ಯವಹಾರಕ್ಕೆ ಬಂಡವಾಳದ ಕೊರತೆಯಾದಾಗ ಇಂತಹ ವಿಷಮ ಪರಿಸ್ಥಿತಿಗಳಲ್ಲಿ ಸಂಸ್ಥೆಯಲ್ಲಿ 'ಏನೋ, ಎಲ್ಲಿಯೋ ಲೋಪವಾಗಿದೆ' ಎಂಬುದು ಗೋಚರವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅಂತಿಮ ಲೆಕ್ಕಗಳ ತಯಾರಿಕೆಯಲ್ಲಿ ತಾಳ ಮೇಳವಿಲ್ಲದಾಗಲೂ ಗೋಚರವಾಗುತ್ತದೆ. ಬಹಳಷ್ಟು ಪ್ರಸಂಗಗಳಲ್ಲಿ 'ಕೊಟ್ಟವನು ಕೋಡಂಗಿ ಈಸಿಕೊಂಡವನು ಈರಭದ್ರ' ಆಗುತ್ತಾನೆ. ಅಲ್ಲದೆ 'ಹುಚ್ಚು ಮುಂಡೆ ಮದುವೇಲಿ ಉಂಡೋನೆ ಜಾಣ' ಎಂಬ ಗಾದೆಗಳು ಸಾರ್ಥಕತೆಯನ್ನು ಪಡೆಯುತ್ತವೆ. ಇದಕ್ಕೆ ಪರಿಹಾರವಾದರೂ ಏನು?

ಇದಕ್ಕೆ ಪರಿಹಾರವೇ 'ಪರಿವೀಕ್ಷಣೆ' ಮತ್ತು 'ಲೆಕ್ಕಪರಿಶೋಧನೆ'. ಅದರಲ್ಲಿಯೂ ಈ ಎರಡು ಕ್ರಿಯೆಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ 'ಆಸ್ತಿಗಳ ಪರಿಶೀಲನೆ ಕಾರ್ಯ'.

ಸಹಕಾರ ಸಂಸ್ಥೆಯ ಸಂಪನ್ಮೂಲಗಳು ಅದರ ಪಾವತಿಯಾದ ಷೇರುಬಂಡವಾಳ, ಕ್ರೋಢೀಕೃತ ನಿಧಿಗಳು, ಠೇವಣಾತಿಗಳು, ಪಡೆದ ಸಾಲಗಳು, ಹಂಚಿಕೆಯಾಗದ ಲಾಭಗಳು, ದೇಣಿಗೆಗಳು, ಕೊಡುಗೆಗಳು ಆಗಿರುತ್ತವೆ. ಇವುಗಳನ್ನು ತನ್ನ ಆಸ್ತಿಯಲ್ಲಿ (ಜಿಂದಗಿ) ತೊಡಗಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ಹೂಡಿಕೆಗಳು, ಸಾಲಗಳು ಮತ್ತು ಮುಂಗಡಗಳು, ಚರ ಮತ್ತು ಸ್ಥಿರ ಆಸ್ತಿಗಳು. ಈ ಆಸ್ತಿಗಳ ನೈಜ, ನಿಖರ ಪರಿಶೀಲನೆ ಆದಲ್ಲಿ ಸಂಪನ್ಮೂಲಗಳು (ಜವಾಬ್ದಾರಿಗಳು, ಸಾಲ) ಎಲ್ಲಿ, ಹೇಗೆ ತೊಡಗಿಸಲಾಗಿದೆ ಎಂಬುದು ಕಂಡುಬರುತ್ತದೆ. ನಗದು ಪರಿಶೀಲನೆ ನಡೆಸಿ, ನಗದು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕಿನಲ್ಲಿನ ಶಿಲ್ಕು ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಖಚಿತ ಪಡಿಸಿಕೊಳ್ಳಬೇಕು. ಹೂಡಿಕೆಗಳ ಬಗ್ಗೆ ಇರುವ ದಾಖಲಾತಿಗಳು, ದೃಢೀಕರಣಗಳು ರಕ್ಷಣೆಗಳ ಸಂಬಂಧಿಸಿದ ಸಂಸ್ಥೆಗಳಿಂದ ಇವುಗಳ ಅಸಲಿಯತ್ತಿನ ಬಗ್ಗೆ ಖಚಿತಗೊಳಿಸಬೇಕು. ತಃಖ್ತೆಯಲ್ಲಿನ ಮೊತ್ತಕ್ಕೂ ದಾಖಲಾತಿಯಲ್ಲಿನ ಮೊತ್ತಕ್ಕೂ ತಾಳೆ ಇರಬೇಕಾಗುತ್ತದೆ. ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಪತ್ತಿನ ಸಹಕಾರ ಸಂಸ್ಥೆಗಳು, ಪತ್ತು ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳು, ಸಹಕಾರ ಬ್ಯಾಂಕ್‌ಗಳು ಇವುಗಳಲ್ಲಿ ಅವರ ಪ್ರಮುಖ ಆಸ್ತಿಯೇ 'ಸಾಲಗಳು ಮತ್ತು ಮುಂಗಡಗಳು'. ಇದರ ವಾಸ್ತವತೆ ಮತ್ತು ಆರೋಗ್ಯವೇ ಸಂಸ್ಥೆಯ ಆಗುಹೋಗುಗಳಿಗೆ ಕಾರಣವಾಗಿರುತ್ತದೆ. ಇದರ ಸವಿವರವಾದ ಪರಿಶಿಷ್ಠ (ಷಡ್ಯೂಲ್) ನಿಖರವಾಗಿ ಪ್ರಕರಣಾವಾರು (ಕೇಸ್ ಬೈ ಕೇಸ್ ಸ್ಟಡಿ, ಅನಾಲಿಸಿಸ್) ವಿಶ್ಲೇಷಣೆ ಮಾಡಲೇಬೇಕಾಗಿರುತ್ತದೆ. ದಾಖಲೆಗಳ ಪರಿಶೀಲನೆಯಲ್ಲದೆ ಸಾಲಗಾರರ ಪರಿಶೀಲನೆ ಅವರು ಒದಗಿಸಿರುವ ರಕ್ಷಣಾತ್ಮಕ ಆಸ್ತಿಗಳ ಬೌಧಿಕ ಪರಿಶೀಲನೆ ಅತಿ ಅಗತ್ಯ. ಸಹಕಾರ ಸಂಸ್ಥೆಗಳಲ್ಲಿ ಅವರು ರಚಿಸಿಕೊಂಡಿರುವ ಸಾಲ ನೀತಿ, ನಿಯಮಗಳು ಅವುಗಳ ಉಲ್ಲಂಘನೆ, ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡಗಳು ಉದಾ: ವಲಯಾವಾರು ತೊಡಗಿಸುವಿಕೆ (exposure norms) ಸಾಲ ಗರಿಷ್ಠ ಮಿತಿ ಎಡರು ತೊಡಕುಗಳು (risks) ಇವುಗಳ ನೈಜ, ನಿಖರ ನಿಷ್ಠೂರವಾದ ಪರಿಶೀಲನೆ ಅಗತ್ಯ. ಇದೇ ರೀತಿಯಲ್ಲಿ 'ಖರೀದಿ ಮಾರಾಟ' 'ರೂಪಾಂತರ/ಸಂಸ್ಕರಣೆ' ಸಹಕಾರ ಸಂಸ್ಥೆಗಳಲ್ಲಿ ಆಖೈರು ದಾಸ್ತಾನಿನ ವಾಸ್ತವ ಪರಿಸ್ಥಿತಿ ಬೌಧಿಕ ಪರಿಶೀಲನೆ ಅತಿ ಅಗತ್ಯ. ಇತರೆ ಚರ ಮತ್ತು ಸ್ಥಿರಾಸ್ತಿಗಳು, ಅವುಗಳ ಸಂಬಂಧಿಸಿದ ದಾಖಲಾತಿಗಳು, ಕಡತಗಳು, ರಿಜಿಸ್ಟರ್‌ಗಳು ಮತ್ತು ಅವುಗಳ ಬೌಧಿಕ ಪರಿಶೀಲನೆ ಬಹು ಮುಖ್ಯ. ಈ ಪರಿಶೀಲನೆಗಳಲ್ಲಿ ವಿಫಲವಾಗಿರುವುದು 'ಹತ್ತಿಕೊಂಡು ಉರಿದ

ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಪರಿಸ್ಥಿತಿಗ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಪರಿಸ್ಥಿತಿ ಕೈಮೀರಿ ಸರಿಪಡಿಸಲಾರದ ಮಟ್ಟವನ್ನು ಮುಟ್ಟಿರುತ್ತೇವೆ. ಹೀಗಾಗಿ ಅನೇಕ ವೇಳೆ ಪರಿವೀಕ್ಷಣೆ, ಲೆಕ್ಕಪರಿಶೋಧನೆ ಕ್ರಮಗಳು 'ಶವ ಪರೀಕ್ಷೆ' ಯಾಗುತ್ತದೆ ವಿನಃ ಸದಸ್ಯರ, ಸಾರ್ವಜನಿಕರ ಹಿತಾಸಕ್ತಿ, ನಿರೀಕ್ಷೆ, ಆಸೆಆಕಾಕ್ಷೆ, ಅಗತ್ಯತೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ.

ಅನೇಕ ಸೋರಿಕೆಗಳು, ದುರುಪಯೋಗಗಳು ದುರ್ವಿನಿಯೋಗಗಳು, ಮಿಥ್ಯ ಆಸ್ತಿಗಳು, ನಷ್ಟಗಳು ಆಸ್ತಿ ತಃಖ್ತೆಯಲ್ಲಿ ಆಸ್ತಿಯಾಗಿ ಹುದುಗಿರುತ್ತವೆ. ಇವುಗಳು 'ಕನ್ನಡಿಯೊಳಗಿನ ಗಂಟು'. 'ಬ್ಯಾಂಕ್‌ಗಳಲ್ಲಿ ಆಸ್ತಿ ವರ್ಗೀಕರಣದಲ್ಲಿ ಆಗುತ್ತಿರುವ ಅಗಾದವಾದ ವ್ಯತ್ಯಾಸಗಳು ಮತ್ತು ತಪ್ಪು ದಾರಿಗೆ ಕಾರಣವಾಗಿರುವ ಲೆಕ್ಕ ತಃಖ್ತೆಗಳ'ನ್ನು ತಡೆಯಲು ಬಿಗಿ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗಿರುತ್ತದೆ. (ಎಕನಮಿಕ್ ಟೈಮ್ಸ್ ವರದಿ ದಿನಾಂಕ 28–4–2021) ಎಂದು ರಿಸರ್ವ್ ಬ್ಯಾಂಕ್ ತಿಳಿಸಿರುತ್ತದೆ. ಈ ಅಕ್ರಮಗಳು "ಆತ್ಮ ವಂಚನೆ" ಯಲ್ಲದೇ ಮತ್ತೇನು? ತನ್ನ ಮೇಲೆ ವಿಶ್ವಾಸ ಇರಿಸಿರುವ ಸದಸ್ಯರಿಗೆ, ಠೇವಣಿದಾರರಿಗೆ ಮೋಸವೆಸಗಿದಂತಾಗಲಿಲ್ಲವೇ? ಸಹಕಾರ ಚಳುವಳಿಗೆ ಇದು ಮಾರಕವಾಗಿ ಪರಿಣಮಿಸುವುದಿಲ್ಲವೇ? ಸಹಕಾರಿಗಳು 'ಆತ್ಮಾವಲೋಕನ' ಮಾಡಿಕೊಳ್ಳಲು ಇದು ಸಕಾಲ.

## ಇ–ಸ್ಟಾಂಪಿಂಗ್ ಉದ್ಘಾಟನೆ



**ಕೊಪ್ಪಳ :** ಗಂಗಾ ಯಮುನಾ ಸಹಕಾರಿಯು ಲಾಕ್‌ಡೌನ್ ನಂತಹ ಕಠಿಣ ಹಾಗೂ ಸಂಧಿಗ್ದ ಪರಿಸ್ಥಿತಿಯಲ್ಲಿ ತನ್ನ ಸದಸ್ಯರ ಮನವಿಗೆ ಸ್ಪಂದಿಸಿ ದಿನಾಂಕ 14–05–2021 ರಂದು ಶ್ರೀ ಜಗಜ್ಯೋತಿ ಬಸವಣ್ಣನ ಜಯಂತಿಯಂದು ಶುಭ ಸಂದರ್ಭದಲ್ಲಿ ಇ–ಸ್ಟಾಂಪಿಂಗ್ ಸೇವೆಯನ್ನು ಪ್ರಾರಂಭಿಸಲಾಯಿತು. ಸದಸ್ಯರ ಬಗ್ಗೆ ಅಪಾರ ಕಾಳಜಿ ಹಾಗೂ ಸೇವಾ ಮನೋಭಾವನೆಯನ್ನು ಹೊಂದಿರುವ ಈ ಸಹಕಾರಿಯನ್ನು ನೋಡಿದರೆ ಇದೊಂದು ಉತ್ತಮ ಸದಸ್ಯ ಸ್ನೇಹಿ ಸಹಕಾರಿಯಾಗಿದೆ ಎಂದು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ್ರು ಹಿರೇಗೌಡ್ರು ತಿಳಿಸದರು. ನಂತರ ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಇದರ ಇ–ಸ್ಟಾಂಪಿಂಗ್ ಸೇವೆಯನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು ಇದು ಲಾಭದಾಯಕವಲ್ಲದ ವ್ಯವಹಾರ ಎಂದು ಗೊತ್ತಿದ್ದರೂ ಸಹ ಸದಸ್ಯರಿಗೆ ಸೇವೆ ನೀಡಬೇಕೆಂಬ ಸದ್ದುದ್ದೇಶದಿಂದ ಈ ದಿನ ಇ–ಸ್ಟಾಂಪಿಂಗ್ ಸೇವೆ ಪ್ರಾರಂಭಿಸುತ್ತಿರುವುದು ಗಮನಿಸಿದರೆ ಸಂತೋಷವಾಗುತ್ತದೆ ಎಂದರು.



**ಮಂಗಳೂರು :** ಶ್ರೀ ಗುರುಶಕ್ತಿ ಸೌಹಾರ್ದ ಕೋ–ಅಪರೇಟಿವ್(ನಿ.) ಕಾವೂರು ಮಂಗಳೂರಿನಲ್ಲಿ ದಿನಾಂಕ 24.05.2021 ರಂದು, ಕೋವೀಡ್ ನಿಯಮಗಳನುಸಾರ ಜರಗಿದ ಸರಳ ಸಮಾರಂಭದಲ್ಲಿ, ಇ–ಸ್ಟಾಂಪಿಂಗ್ ನ ಉದ್ಘಾಟನಾ ಕಾರ್ಯಕ್ರಮವನ್ನು ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ವೈ ಭರತ್ ಶೆಟ್ಟಿ ಇವರು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಮಂಗಳೂರು ಮಹಾನಗರ ಪಾಲಿಕೆಯ ಉಪ ಮೇಯರ್ ಶ್ರೀಮತಿ ಸುಮಂಗಲಾ ರಾವ್, ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ವ್ಯವಸ್ಥಾಪಕರು ಹಾಗೂ ಜಿಲ್ಲಾ ಸಂಯೋಜಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಭಾಗವಹಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರ ಶೇಖರ್ ಕುಮಾರ್ ಹಾಗೂ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು. ಸಿಇಓ ಕಾವ್ಯಾ ಅಂಚನ್ ಪ್ರಸ್ತಾವನೆಗೈದು ವಂದಿಸಿದರು.

## ಜೈಗಣೇಶ್ ಸೌಹಾರ್ದ ಸಹಕಾರಿಯಿಂದ ಪಲ್ಸ್ ಆಕ್ಸಿಮೀಟರ್ ಮತ್ತು ಥರ್ಮಲ್ ಸ್ಕ್ಯಾನರ್ ಕೊಡುಗೆ.



**ಉಡುಪಿ :** ಜೈಗಣೇಶ್ ಸೌಹಾರ್ದ ಸಹಕಾರಿ ನಿಯಮಿತ ಸ್ಯಾಬರಕಟ್ಟೆ – ಶಿರಿಯಾರ ಇದರ ವತಿಯಿಂದ ಸ್ಯಾಬರಕಟ್ಟೆಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 10 ಬಿ.ಪಿ.ಎಲ್ ಪಲ್ಸ್ ಆಕ್ಸಿಮೀಟರ್ ಮತ್ತು 10 ಥರ್ಮಲ್ ಸ್ಕ್ಯಾನರ್ ಮತ್ತು ಫೇಸ್ ಶೀಲ್ಡಗಳನ್ನು ಕೊಡುಗೆಯಾಗಿ ನೀಡಲಾಯಿತು. ಪ್ರಸ್ತುತ ಶಿರಿಯಾರ, ಯಡ್ತಾಡಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಕೊರೋನ ಪ್ರಕರಣಗಳು ಕಂಡುಬರುತ್ತಿದ್ದು, ಸೋಂಕಿನ ಶೀಘ್ರ ಪತ್ತೆ ಮತ್ತು ಸೋಂಕು ಉಲ್ಬಣಿಸದಂತೆ ತಡೆಯಲು ಸಹಕಾರಿಯಾಗಿ ಈ ಕೊಡುಗೆಯನ್ನು ನೀಡಲಾಯಿತು. ಆಸ್ಪತ್ರೆಯ ಪರವಾಗಿ ವೈದ್ಯಾಧಿಕಾರಿ ಶ್ರೀ ಜಯಶೀಲ ಆಚಾರ್ಯ ಕೊಡುಗೆಯನ್ನು ಸ್ವೀಕರಿಸಿ ಕೊವಿಡ್ – 19 ವಿರುದ್ದ ಹೋರಾಡಲು ಪೂರಕ ಉಪಕರಣಗಳನ್ನು ಒದಗಿಸಿದ ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಜೈಗಣೇಶ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಅಶೋಕ ಪ್ರಭು ಮತ್ತು ನಿರ್ದೇಶಕರು, ಸಿಬ್ಬಂದಿಗಳು ಮತ್ತು ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# "ಹಸಿರೇ ಉಸಿರು"
# ವಿಶ್ವ ಪರಿಸರ ದಿನಾಚರಣೆಯ ಮಹತ್ವ

– ಶ್ರೀ ಶಂಕರ್ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು.

"ಪ್ರತಿಯೊಬ್ಬ ಮನುಷ್ಯನ ಅಗತ್ಯಗಳನ್ನು ಪೂರೈಸಲು ಭೂಮಿಯು ಸಾಕಷ್ಟು ಒದಗಿಸುತ್ತದೆ, ಆದರೆ ಪ್ರತಿಯೊಬ್ಬ ಮನುಷ್ಯನ ದುರಾಸೆಗಳನ್ನಲ್ಲ"

- ಮಹಾತ್ಮ ಗಾಂಧಿ



**ಪೀಠಿಕೆ :**

ವಿಶ್ವಸಂಸ್ಥೆಯು 1972 ರ ಮಹಾಸಭೆಯಲ್ಲಿ ಪರಿಸರ ದಿನಾಚರಣೆ ಆಚರಿಸಬೇಕು ಎಂದು ನಿರ್ಧರಿಸಲಾಯಿತು. 1973 ರಿಂದ ಪರಿಸರ ದಿನದ ಆಚರಣೆ ಪ್ರಾರಂಭವಾಯಿತು. ಅಂತೆಯೇ ಜೂನ್ 5 ವಿಶ್ವ ಪರಿಸರ ದಿನಾಚರಣೆ. ಪ್ರಪಂಚದಾದ್ಯಂತ ಗಿಡ ನೆಡುವ ಮೂಲಕ ಸಂಭ್ರಮದಿಂದ ಒಂದು ನಿರ್ದಿಷ್ಟ ವಸ್ತು ವಿಷಯವನ್ನಾಧರಿಸಿ ಆಚರಿಸಲಾಗುತ್ತಿದೆ. ಈ ದಿನದ ವಿಶೇಷವೇನೆಂದರೆ ಎಲ್ಲರಿಗೂ ಪರಿಸರ ಸಂಬಂಧಿತ ವಿಷಯಗಳು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬುದೇ ಆಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಸರದ ಸ್ಥಿತಿ ಗತಿ ತಿಳಿಯುವುದು, ಸ್ವಚ್ಛ ಪರಿಸರದ ಅಗತ್ಯತೆಯನ್ನು ಅರಿಯುವುದು ಹಾಗೂ ಜನರಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿಯನ್ನು ಜಾಗತಿಕ ಮಟ್ಟದಲ್ಲಿ ಮೂಡಿಸುವಂತಹ ಘನೋದ್ದೇಶಗಳು ಪರಿಸರ ಆಚರಣೆಯಲ್ಲಿ ಸೇರಿವೆ.

ಜೂನ್ ತಿಂಗಳೆಂದರೆ ಅದಕ್ಕೆ ಒಂದು ವಿಶೇಷತೆ ಇದೆ. ಅದೇನೆಂದರೆ ವಿಶ್ವ ಪರಿಸರ ದಿನಾಚರಣೆ. ನಾವು ನಮ್ಮ ಪರಿಸರದ ಬಗ್ಗೆ ತಿಳಿಯುವ, ಅದರ ಮಹತ್ವ ಅರಿಯುವ ಹಾಗೂ ಇಂದು ಪರಿಸರಕ್ಕೆ ಆಗುತ್ತಿರುವ ಹಾನಿಯನ್ನು ಅರಿತು, ಅದರ ಸಂರಕ್ಷಣೆಯ ಬಗ್ಗೆಯೂ ಆಲೋಚಿಸಬೇಕಾದ ಮಹತ್ತರವಾದ ದಿನ. ಮಾನವ ಪರಿಸರದ ಶಿಶು, ಪರಿಸರವಿಲ್ಲದೆ ಮಾನವನ ಅಸ್ತಿತ್ವಕ್ಕೆ ಯಾವುದೇ ರೀತಿಯ ಬೆಲೆಯಿರುವುದಿಲ್ಲ. ಆದ್ದರಿಂದಲೇ ಪ್ರತಿಯೊಬ್ಬರೂ ಪರಿಸರದ ಬಗ್ಗೆ ಅರಿಯಬೇಕಾದ ಅವಶ್ಯಕತೆ, ಅನಿವಾರ್ಯತೆ ಎರಡೂ ಇದೆ.

ಪ್ರಸ್ತುತ ಜಗತ್ತಿನಲ್ಲಿ ಆಧುನಿಕತೆ, ನಗರೀಕರಣ, ಕೈಗಾರೀಕರಣ, ವಿಜ್ಞಾನ, ತಂತ್ರಜ್ಞಾನದ ಅಭಿವೃದ್ಧಿ ಎಂಬ ಹತ್ತು ಹಲವು ಕಾರಣಗಳಿಂದ ಇಂದು ಪರಿಸರಕ್ಕೆ ತೀವ್ರ ಹಾನಿಯುಂಟಾಗಿದ್ದು, ಪರಿಸರವನ್ನು ರಕ್ಷಿಸುವ, ಸಂರಕ್ಷಿಸುವ ಕರ್ತವ್ಯ ಪ್ರತಿಯೊಬ್ಬರದೂ ಆಗಿದ್ದು, ಈ ಕರ್ತವ್ಯವನ್ನು ನಮಗೆಲ್ಲರಿಗೂ ನೆನಪಿಸುವ ಮಹತ್ವದ ಉದ್ದೇಶ ಕೂಡಾ ಈ ಪರಿಸರ ದಿನಾಚರಣೆಯ ಮಹತ್ವವಾಗಿದೆ.

ಪರಿಸರ ದಿನಾಚರಣೆಯ ಈ ಸಂದರ್ಭದಲ್ಲಿ ಪರಿಸರದ ಶಿಶುಗಳೆನಿಸಿದ ನಮ್ಮ ಮೇಲೆ ಪರಿಸರ ಸಂರಕ್ಷಣೆಯ ಜವಾಬ್ದಾರಿ ತುಸು ಹೆಚ್ಚಾಗಿಯೇ ಇದೆ. ಇಂದಿನ ಪರಿಸರ ಮಾಲಿನ್ಯದ ಗೂಡಾಗಿದ್ದು, ನಮ್ಮ ಇರುವಿಕೆಗೆ ಅರ್ಥ ನೀಡಿದ ಪರಿಸರ ಮಾತೆಯನ್ನು ನಾವು, ನಮ್ಮ ಕಾರ್ಯಗಳಿಂದ ಕಲುಷಿತಗೊಳಿಸಿ, ಅದರ ದುಷ್ಪರಿಣಾಮಗಳನ್ನು ಈಗಾಗಲೇ ಎದುರಿಸುತ್ತಿದ್ದೇವೆ. ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ಧ ಮಾಲಿನ್ಯ, ಅಧಿಕ ಉಷ್ಣಾಂಶ, ಮಣ್ಣಿನ ಮಾಲಿನ್ಯ , ಅರಣ್ಯ ನಾಶ ಹೀಗೆ ಒಂದೇ, ಎರಡೇ ಪರಿಸರದಲ್ಲಿ ಇಂದು ಉಂಟಾಗಿರುವ ಏರುಪೇರುಗಳು. ಈ ಏರುಪೇರುಗಳಿಗೆ ಕಾರಣ, ಅಭಿವೃದ್ಧಿ ಹೆಸರಿನಲ್ಲಿ ನಾವು ಪರಿಸರದ ಮೇಲೆ ಮಾಡಿರುವ ದೌರ್ಜನ್ಯದ ಫಲವಾಗಿದ್ದು, ಅದರ ಪರಿಣಾಮವಾಗಿ ಹೃದಯ ಸಂಬಂಧಿ, ಉಸಿರಾಟ ಸಂಬಂಧಿ, ಕ್ಯಾನ್ಸರ್, ಅಪೌಷ್ಟಿಕತೆಯಂತಹ ಅನೇಕ ಕಾಯಿಲೆಗಳನ್ನು ನಾವು ಎದುರಿಸಬೇಕಾಗಿದೆ.

ಈ ಎಲ್ಲದಕ್ಕೂ ಕಾರಣ ಪರಿಸರದ ಬಗ್ಗೆ ಹಾಗೂ ಅದರ ಪ್ರಾಮುಖ್ಯತೆ ಬಗ್ಗೆ ನಮಗೆ ಸರಿಯಾದ ಅರಿವು ಇಲ್ಲದಿರುವುದೇ ಆಗಿದೆ. ಆದ್ದರಿಂದಲೇ ನಮ್ಮೆಲ್ಲರಲ್ಲೂ ಜಾಗೃತಿ ಮೂಡಿಸಲು, ಪರಿಸರದ ಪರ ನಮ್ಮ ಕರ್ತವ್ಯ ಪಾಲಿಸಲು, ನಮ್ಮ ಉತ್ತಮ ಭವಿಷ್ಯಕ್ಕಾಗಿ, ನಮ್ಮ ಮುಂದಿನ ಪೀಳಿಗೆಯ ಉಜ್ವಲಕ್ಕಾಗಿ, ನಾಳೆಗಳಿಗಾಗಿ ನಾವು ಇಂದು ಇಂದಿನ ಮಕ್ಕಳಿಗೆ, ಯುವ ಜನರಿಗೆ ಪರಿಸರದ ಕಾಳಜಿ ಮೂಡಿಸಬೇಕು. ಜಾಗತಿಕ ಮಟ್ಟದಲ್ಲಿ ಸುಮಾರು ನೂರಕ್ಕಿಂತ ಹೆಚ್ಚಿನ ರಾಷ್ಟ್ರಗಳು ಜೂನ್ ಐದನ್ನು ಪರಿಸರ ದಿನವನ್ನಾಗಿ ಆಚರಿಸುವುದರಿಂದಲೇ ಇದು ವಿಶ್ವ ಪರಿಸರ ದಿನಾಚರಣೆ ಎನಿಸಿಕೊಂಡಿದೆ.

ಪರಿಸರ, ಪಕೃತಿ ನಮಗೆ ಯಾವುದನ್ನು ನೀಡಲ್ಲ. ಎಲ್ಲವನ್ನೂ ನೀಡುತ್ತದೆ. ಅಗಣಿತವಾದ ಅಮೂಲ್ಯ ಕೊಡುಗೆಗಳನ್ನು ನೀಡುತ್ತದೆ. ಪ್ರತಿಯೊಂದು ಜೀವ ಸಂಕುಲಕ್ಕೆ ಅಗತ್ಯ, ಅನಿವಾರ್ಯ. ಆದರೆ ನಾವಿಂದು ಪರಿಸರಕ್ಕಾಗಿ, ಏನನ್ನು ಕೊಟ್ಟಿದ್ದೇವೆ.. ಕೊಡುತ್ತಿದೇವೆ ಎಂಬುದನ್ನು ಪ್ರತಿಯೊಬ್ಬ ಮಾನವನು ತನಗೆ ತಾನೇ ಹಾಕಿಕೊಳ್ಳಬೇಕಾದ ಪ್ರಶ್ನೆ. ಉತ್ತರ ಮಾತ್ರ ನಗಣ್ಯ. ಕೊನೆ ಪಕ್ಷ ಇರುವ ಪರಿಸರವನ್ನು ರಕ್ಷಿಸಿಕೊಳ್ಳುವ ಬಗ್ಗೆ ಕಿಂಚಿತ್ತೂ ಯೋಚಿಸಲೂ.

**ಉಪಸಂಹಾರ :**

ಪ್ರತಿಯೊಬ್ಬರಲ್ಲೂ ಪರಿಸರದ ಬಗ್ಗೆ ಜಾಗೃತಿ ಮೂಡಬೇಕು. ಕೇವಲ ವರ್ಷಕ್ಕೆ ಒಂದು ದಿನ ಪರಿಸರ ರಕ್ಷಣೆಯೆಂಬುದು ಸೀಮಿತವಾಗಬಾರದು. ವರ್ಷದ ಪ್ರತಿ ದಿನವೂ ನಮಗೆ ಪರಿಸರ ದಿನವಾಗಬೇಕು. ಏಕೆಂದರೆ ಪರಿಸರ ನಮ್ಮ ಜೀವನದ ಅವಿಭಾಜ್ಯ ಅಂಗ. ಪರಿಸರವಿಲ್ಲದೆ ಮಾನವನಿಲ್ಲ ಎಂಬ ನಿತ್ಯ ಸತ್ಯವನ್ನು ನಾವಿಂದು ನಮ್ಮ ಜೀವನದ ಗುರಿಯನ್ನಾಗಿಸಿಕೊಂಡು ಪರಿಸರ ಸಂರಕ್ಷಣೆಯತ್ತ ಹೋಗೋಣ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-14)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-14)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 14: ನೀರಿನ ಕೆಳಗಿನ ಜೀವವೈವಿಧ್ಯ

ಸಮುದ್ರಗಳು, ಮಹಾಸಾಗರಗಳು ಮತ್ತು ಸಾಗರೋತ್ಪನ್ನಗಳನ್ನು ಸಂರಕ್ಷಿಸುವುದು ಮತ್ತು ಸುಸ್ಥಿರವಾಗಿ ಬಳಸುವುದು (Conserve and sustainably use the oceans, seas and marine resources for sustainable development) ಸುಸ್ಥಿರ ಅಭಿವೃದ್ಧಿ ಸಾಧನೆಗೆ ಅಗತ್ಯವೆಂಬುದು ಈ ಗುರಿಯ ಆಶಯವಾಗಿದೆ. ಭೂಮಿಯ ಮೇಲಿರುವಷ್ಟೇ ಜೀವಿಗಳು, ಸಂಪನ್ಮೂಲಗಳು ನೀರಿನಡಿಯಲ್ಲಿ ಇರುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ. ವಿಶೇಷವಾಗಿ ಸಮುದ್ರಗಳು ಮತ್ತು ಮಹಾಸಾಗರಗಳು ಜಗತ್ತಿನ ಹಲವು ಅಗತ್ಯಗಳನ್ನು ಪೂರೈಸುವ ಮೂಲಗಳಾಗಿವೆ. ಪ್ರಪಂಚದ ಜನಸಂಖ್ಯೆಯ ಪ್ರತಿ ಐದರಲ್ಲಿ ಒಬ್ಬರು ತಮ್ಮ ಆಹಾರದಲ್ಲಿನ ಪ್ರೊಟೀನ್‌ಗಳನ್ನು ಮೀನು ಮುಂತಾದ ಸಮುದ್ರ ಉತ್ಪನ್ನಗಳಿಂದ ಪಡೆಯುತ್ತಿದ್ದಾರೆ. ಜಗತ್ತಿನ ಹಲವಾರು ದೇಶಗಳು ತಮ್ಮ ಆದಾಯದ ಬಹುದೊಡ್ಡ ಪಾಲನ್ನು ಸಮುದ್ರೋತ್ಪನ್ನಗಳ ಮೂಲಕ ಪಡೆಯುತ್ತಿವೆ. ಪ್ರಯಾಣ ಮತ್ತು ಸಾಗಣೆಯ ಮಾರ್ಗವಾಗಿ, ಆಹಾರ ಮತ್ತು ಖನಿಜಗಳ ಮೂಲವಾಗಿ ಮತ್ತು ಜಗತ್ತಿನ ಪರಿಸರ ಸಮತೋಲನ ಕಾಪಾಡುವ ಮಾಧ್ಯಮವಾಗಿ ಸಮುದ್ರ ಮತ್ತು ಮಹಾಸಾಗರಗಳು ಬಹುಮೂಲ್ಯ ಪಾತ್ರ ನಿರ್ವಹಿಸುತ್ತಿವೆ. ಆದರೆ ಜನಸಂಖ್ಯೆಯ ಹೆಚ್ಚಳ, ಬೆಳವಣಿಗೆಯ ವೇಗ ಮತ್ತು ಮುಖ್ಯವಾಗಿ ಮನುಷ್ಯನ ದುರಾಸೆ ಹಾಗೂ ಬೇಜವಾಬ್ದಾರಿತನದಿಂದಾಗಿ ಈ ಮೂಲಗಳು ಇಂದು ಸಂಕಷ್ಟಗಳನ್ನು ಎದುರಿಸುತ್ತಿವೆ. ಸಮುದ್ರಗಳ ಮೇಲೆ ಚಲಿಸುವ ವಾಹನಗಳಿಂದ ನಿರಂತರವಾಗಿ ಹೊರಸೂಸುವ ಹೊಗೆ ಮತ್ತು ಇತರೆ ತ್ಯಾಜ್ಯಗಳು ಸಮುದ್ರದ ನೀರಿನ ಆಮ್ಲೀಕರಣಕ್ಕೆ ಕಾರಣವಾಗುತ್ತಿವೆ. ಕೈಗಾರಿಕಾ ತ್ಯಾಜ್ಯಗಳನ್ನು ಸಮುದ್ರಕ್ಕೆ ಬಿಡುವುದು, ತೈಲ ಮತ್ತಿತರ ವಸ್ತುಗಳು ಸಮುದ್ರದಲ್ಲಿ ಸೋರಿಕೆಯಾಗುವುದು, ನಗರಗಳ ತ್ಯಾಜ್ಯಗಳು ಸಮುದ್ರಕ್ಕೆ ಎಸೆಯಲ್ಪಡುವುದು ಮುಂತಾದುವುಗಳಿಂದಾಗಿ ನೀರು ಕಲುಶಿತವಾಗುವುದರ ಜೊತೆಗೆ ಜಲಚರಗಳ ಜೀವಹಾನಿಯೂ ಅಪಾರವಾಗಿ ನಡೆಯುತ್ತಿದ್ದು, ನೀರಿನಡಿಯ ಜೀವವೈವಿಧ್ಯವು ತೊಂದರೆಗೆ ಸಿಲುಕಿದೆ. ಆದುದರಿಂದಲೇ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ಸಮುದ್ರ ಮತ್ತು ಸಾಗರಗಳನ್ನು ಸಂರಕ್ಷಿಸಿ ಅವುಗಳಲ್ಲಿನ ಜೀವವೈವಿಧ್ಯತೆಯನ್ನು ಕಾಪಾಡುವತ್ತ ಗಮನಹರಿಸಲಾಗಿದೆ.

ಸುಸ್ಥಿರ ಅಭಿವೃದ್ಧಿಯ ಭಾಗವಾಗಿ ಈ ಗುರಿಯು ಭೂಮಿಯ ಮೇಲಿನ ಚಟುವಟಿಕೆಗಳಿಂದಾಗಿ ಸಮುದ್ರ ಕಲುಶಿತವಾಗುವುದನ್ನು 2025ರೊಳಗಾಗಿ ಈಗಿರುವುದರ ಅರ್ಧದಷ್ಟು ಕಡಿಮೆಮಾಡಬೇಕೆಂದೂ ಮತ್ತು ಇದೇ ಅವಧಿಯಲ್ಲಿ ನೀರಿನೊಳಗಿನ ಮತ್ತು ತೀರಪ್ರದೇಶಗಳ ಪರಿಸರವನ್ನು ಸಂರಕ್ಷಿಸಿ ಸುಸ್ಥಿರವಾಗಿ ಬಳಸುವ ಮಾರ್ಗೋಪಾಯಗಳನ್ನು ಚಾಲ್ತಿಗೆ ತರಬೇಕೆಂದೂ ವಿಧಿಸುತ್ತದೆ. ಸಾಗರಗಳ ಆಮ್ಲೀಕರಣವನ್ನು ವೈಜ್ಞಾನಿಕ ಅನ್ವೇಶಣೆಗಳ ಮೂಲಕ ಕಡಿಮೆಮಾಡುವುದು, ಅನಿಯಂತ್ರಿತ ಮತ್ತು ಕಾನೂನು ಬಾಹಿರ ಮೀನುಗಾರಿಕೆಯನ್ನು ಪೂರ್ಣವಾಗಿ ನಿಲ್ಲಿಸುವುಸು, ದ್ವೀಪ ರಾಷ್ಟ್ರಗಳ ಅಭಿವೃದ್ಧಿಗೆ ಪ್ರರ‍್ಯಾಯ ಮಾರ್ಗೋಪಾಯಗಳನ್ನು ಹುಡುಕುವುದು, ನೀರು ಮತ್ತು ನೀರಿನ ಜೀವ ವೈವಿಧ್ಯದ ರಕ್ಷಣೆಗೆ ಸಂಬಂಧಿಸಿದಂತೆ ವೈಜ್ಞಾನಿಕ ಅರಿವನ್ನು ವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು, ಯಾಂತ್ರೀಕೃತ ಮೀನಿಗಾರಿಕೆಯ ಬದಲಿಗೆ ಸಣ್ಣ ಮತ್ತು ಸ್ಥಳೀಯ ಪದ್ಧತಿಯ ಮೀನುಗಾರಿಕಾ ಪದ್ಧತಿಗಳಿಗೆ ಉತ್ತೇಜನ ನೀಡುವುದು ಮತ್ತು ಸಂಯುಕ್ತ ರಾಷ್ಟ್ರಸಂಸ್ಥೆಯ ಮಾರ್ಗಸೂಚಿಯನುಸಾರ ಸಮುದ್ರ ಮತ್ತು ಸಾಗರ ಪ್ರದೇಶಗಳನ್ನು ರಕ್ಷಿಸಲು ಅಂತಾರಾಷ್ಟ್ರೀಯ ನೀತಿ ಹಾಗು ಕಾನೂನುಗಳನ್ನು ಜಾರಿಗೆ ತರುವುದು ಇವು ನೀರಿನೊಳಗಿನ ಜೀವಜಗತ್ತಿಗೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಯಲ್ಲಿ ಸೂಚಿಸಿರುವ ಇತರೆ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ.

ನೀರಿನೊಳಗಿನ ಜೀವವೈವಿಧ್ಯ ಮತ್ತು ಸಂಪನ್ಮೂಲಗಳ ಸಂರಕ್ಷಣೆ ಹೆಚ್ಚಾಗಿ ತೀರಪ್ರದೇಶದಲ್ಲಿ ವಾಸಿಸುವ ಸಮುದಾಯಗಳನ್ನು ಅವಲಂಬಿಸಿದೆ. ಈ ಸಮುದಾಯಗಳು ತಮ್ಮ ಜೀವನಕ್ಕಾಗಿ ಸಮುದ್ರವನ್ನು ಅವಲಂಬಿಸಿರುವುದರಿಂದ ಅದರ ಅಳಿವು ಉಳಿವಿನಲ್ಲೇ ಸಮುದಾಯಗಳ ಅಳಿವು ಉಳಿವೂ ನಿಂತಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮೀನುಗಾರ ಸಮುದಾಯಗಳ ಪಾತ್ರ ಬಹುಮುಖ್ಯ. ಮೀನು ಮತ್ತಿತರ ಸಾಗರೋತ್ಪನ್ನಗಳನ್ನು ಅವಲಂಬಿಸಿರುವವರು ಅಭಿವೃದ್ಧಿಶೀಲ ದೇಶಗಳಲ್ಲೇ ಹೆಚ್ಚಾಗಿರುವುದನ್ನು ಹಾಗೂ ಇವರ ಮೀನುಗಾರಿಕೆಯ ಶೇಕಡ 90 ಭಾಗ ಸಣ್ಣ ಮತ್ತು ಸ್ಥಳೀಯ ಮಾದರಿಯನ್ನೇ ಅವಲಂಬಿಸಿರುವುದನ್ನೂ ಕಾಣುತ್ತೇವೆ. ಆದುದರಿಂದ ಈ ಸಮುದಾಯಗಳ ಸುಸ್ಥಿರ ಅಭಿವೃದ್ಧಿಯ ಪ್ರಮುಖ ಆಯಾಮಗಳಾದ ಬಡತನ ನಿರ್ಮೂಲನೆ (ಎಸ್‌ಡಿಜಿ–1) ಮತ್ತು ಹಸಿವಿನ ಅಂತ್ಯ (ಎಸ್‌ಡಿಜಿ–2) ಇವುಗಳಿಗೂ ಸಮುದ್ರ ಮತ್ತು ಸಾಗಜೀವಿಗಳು ಹಾಗೂ ಸಂಪನ್ಮೂಲಗಳ ರಕ್ಷಣೆಗೂ ಬಹುನಿಕಟ ಸಂಬಂಧವಿದೆ ಎನ್ನಬಹುದು.

### ಸಹಕಾರಿ ಸಂಸ್ಥೆಗಳ ಪಾತ್ರ :

ಆಹಾರ ಭದ್ರತೆ ಮತ್ತು ಬಡತನ ನಿರ್ಮೂಲನೆಯ ಹಿನ್ನೆಲೆಯಲ್ಲಿ ರಚಿತವಾದ ಸುಸ್ಥಿರ ಕಿರು ಮತ್ಸ್ಯೋದ್ಯಮದ ಬಗೆಗಿನ ಮಾರ್ಗಸೂಚಿಗಳು (SSF Guidelines) ಸಹಕಾರಿ ಸಂಘಟನೆಗಳ ಸಾಂಘಿಕ ಶಕ್ತಿಯನ್ನು ಹೆಚ್ಚಿಸುವ ಅಗತ್ಯವನ್ನು ಗುರುತಿಸುವ ಮೂಲಕ ಸುಸ್ಥಿರ ಮೀನುಗಾರಿಕೆಯಲ್ಲಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 36
Licensed to post without Prepayment License No. PMG BG/WPP-384/2020-2022.

ಸಹಕಾರಿ ಸಂಘಗಳ ಪಾತ್ರವನ್ನು ಒತ್ತಿ ಹೇಳಿದೆ. ಸಹಕಾರಿ ಸಂಘಗಳು ಮೀನುಗಾರರ ಹಿತ ರಕ್ಷಣೆಯ ಜೊತೆ ಜೊತೆಗೇ ಅವರುಗಳು ಸಾಂಘಿಕ ನೆಲೆಯಲ್ಲಿ ತಮ್ಮ ಜೀವನದ ಆಸರೆಯಾದ ಸಮುದ್ರವನ್ನು ರಕ್ಷಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲೂ ಸಹಕರಿಸುತ್ತಿವೆ. ಕೋಸ್ಟರೀಕ ದೇಶದ ಸಣ್ಣ ಮೀನುಗಾರರ ಸಹಕಾರಿ ಸಂಘವಾದ ಕೋಪ್ಸೊಸಾಲಿಡೆರ್ (CoopeSolidar) ಅಂತಾರಾಷ್ಟ್ರೀಯ ಮಾನದಂಡಗಳಾದ ಎಸ್‌ಎಸ್‌ಎಫ್ ಮಾರ್ಗಸೂಚಿ ಹಾಗೂ ಜವಾಬ್ದಾರಿಯುತ ಸಾಗರ ಮೀನುಗಾರಿಕೆಯ (Marine Responsible Fishing Areas) ಕಾರ್ಯ ಯೋಜನೆಗಳಿಗನುಸಾರವಾಗಿ ಮೀನುಗಾರಿಕೆಯನ್ನು ನಡೆಸುತ್ತಾ ಇಡೀ ದೇಶಕ್ಕೆ ಮಾದರಿಯಾಗಿದೆ. ಇಂಗ್ಲೆಂಡ್‌ನ ಕ್ಯಾಚ್‌ಬಾಕ್ಸ್ ಸಹಕಾರಿ ಸಂಸ್ಥೆಯು ಮೀನುಗಾರರು ಮತ್ತು ಮೀನು ಬಳಕೆದಾರ ಸಮುದಾಯಗಳನ್ನು ಪರಸ್ಪರ ಹತ್ತಿರ ತಂದು ಅವರುಗಳ ನಡುವೆ ಸಂವಹನವನ್ನು ಏರ್ಪಡಿಸುತ್ತಾ ಮೀನುಗಾರಿಕೆ ಹಾಗೂ ಮೀನಿನ ಬಳಕೆ ಎರಡೂ ಸುಸ್ಥಿರ ನೆಲೆಯಲ್ಲಿ ನಡೆಯುವಂತಾಗಲು ಶ್ರಮಿಸುತ್ತಿದೆ.

ಜಪಾನ್ ದೇಶದಲ್ಲಿ ಮೀನುಗಾರಿಕಾ ಸಹಕಾರಿ ಸಂಘಗಳು ಮತ್ತು ಗ್ರಾಹಕ ಸಹಕಾರಿ ಸಂಘಗಳು ಪರಸ್ಪರ ಸಹಕಾರದೊಂದಿಗೆ ಸುಸ್ಥಿರ ಸಾಗರೋತ್ಪನ್ನ ಉದ್ಯಮ ಹಾಗೂ ಸುಸ್ಥಿರ ಬಳಕೆ ಕ್ರಮಗಳನ್ನು ಒಟ್ಟಾಗಿ ಪ್ರಚುರಪಡಿಸಲು ಶ್ರಮಿಸುತ್ತಿವೆ. ಉದಾಹರಣೆಗೆ ಹೊಕ್ಕೈಡೊ ಪ್ರದೇಶದಲ್ಲಿರುವ ಜೊತ್ಸುಕೆ ಮೀನುಗಾರಿಕಾ ಸಹಕಾರಿ ಸಂಘವು ಪರಿಸರ ಸ್ನೇಹಿ ಮೀನುಗಾರಿಕಾ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದರ ಜೊತೆಗೆ ಸಾಗರ ತೀರದಲ್ಲಿ ಕಾಡುಬೆಳೆಸಲು ಮತ್ತು ಇರುವ ಕಾಡು ಹಾಗೂ ಸಸ್ಯ ಪ್ರಭೇದಗಳನ್ನು ಸಂರಕ್ಷಿಸಲು ಶ್ರಮಿಸುತ್ತಿದೆ. ಹಾಗೆಯೇ, ದಕ್ಷಿಣ ಜಪಾನ್‌ನಲ್ಲಿರುವ ಒನ್ನಸಾನ್ ಸಹಕಾರಿ ಸಂಘವು ತನ್ನ ಪ್ರದೇಶದ ಉಷ್ಣವಲಯ ಕಾಡುಗಳನ್ನು ರಕ್ಷಿಸುವ ಮೂಲಕ ಸಮುದ್ರ ಕಳೆ (seaweed) ಮತ್ತು ಇತರೆ ಜಲಸಸ್ಯಗಳನ್ನು ಸಂರಕ್ಷಿಸುವ ದೀರ್ಘಾವಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಬ್ರೆಝಿಲ್‌ನ ಕನೆನಿಯ ಆಯ್ಸ್ಟರ್ ಉತ್ಪಾದಕರ ಸಹಕಾರಿ ಸಂಘವು ಸ್ಥಳೀಯ ಸಮುದ್ರ ತೀರದ ಮ್ಯಾನ್‌ಗ್ರೋವ್ ಅರಣ್ಯಕ್ಕೆ ಧಕ್ಕೆ ಬರದಂತೆ, ಅಯ್ಸ್ಟರ್ ಕೃಷಿ ಮಾಡುತ್ತ ತನ್ನ ಎಲ್ಲ ಸದಸ್ಯರೂ ಸ್ಥಳೀಯ ಪರಿಸರ, ನೀರು ಮತ್ತು ಅರಣ್ಯ ರಕ್ಷಣೆಗೆ ಆದ್ಯತೆ ನೀಡುವಂತೆ ನೋಡಿಕೊಳ್ಳುತ್ತಿದೆ. ದಕ್ಷಿಣ ಆಫ್ರಿಕದ ಕೇಪ್‌ಟೌನ್‌ನಲ್ಲಿರುವ ಸಣ್ಣ ಪ್ರಮಾಣದ ಮಹಿಳಾ ಮೀನುಗಾರಿಕಾ ಸಹಕಾರಿ ಸಂಘವು ಮೀನುಗಾರರು ಮಧ್ಯವರ್ತಿಗಳ ಹಿಡಿತಕ್ಕೆ ಸಿಗದಂತೆ ನೋಡಿಕೊಳ್ಳುತ್ತಾ, ತನ್ನೆಲ್ಲ ಸದಸ್ಯರು ಉತ್ತಮ ಗುಣಮಟ್ಟದ ಮೀನುಗಾಕಾ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವಂತೆ ತರಬೇತಿ ನೀಡಿ ಸಾಗರ ತೀರದ ರಕ್ಷಣೆ ಹಾಗೂ ಸಾಗರೋತ್ಪನ್ನಗಳು ಕಾಲಕಾಲಕ್ಕೆ ಪುನರುಜ್ಜೀವನಗೊಳ್ಳುವಂತೆ ನೋಡಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಸುಸ್ಥಿರ ಅಭಿವೃದ್ಧಿಯ 14ನೇ ಗುರಿಯಲ್ಲಿ ಸೂಚಿಸಿರುವ ಆದ್ಯತೆಗಳು ಮತ್ತು ಜಗತ್ತಿನ ವಿವಿಧೆಡೆಯಲ್ಲಿ ಸಹಕಾರಿ ಸಂಘಗಳು ಈ ಬಗ್ಗೆ ಕೈಗೊಂಡಿರುವ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಮ್ಮ ದೇಶದ ಸಹಕಾರಿ ಸಂಘಗಳೂ ಹಲವಾರು ಕಾರ್ಯಕ್ರಮಗಳನ್ನು ಚಾಲ್ತಿಗೆ ತರಬಹುದಾಗಿದೆ. ಕೆಲವು ಸಾಧ್ಯತೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

1. ಸಮುದ್ರತೀರ ಪ್ರದೇಶಗಳಲ್ಲಿರುವ ಸಹಕಾರಿ ಸಂಘಗಳು ವಿವಿಧ ತ್ಯಾಜ್ಯಗಳನ್ನು ಸಮುದ್ರಕ್ಕೆ ಬಿಡುವುದರಿಂದ ಆಗುವ ಅಪಾಯಗಳ ಬಗ್ಗೆ ಜನಜಾಗೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು.
2. ಮೀನುಗಾರಿಕಾ ಸಹಕಾರಿ ಸಂಘಗಳು ಸುಸ್ಥಿರ ಮೀನುಗಾರಿಕಾ ಪದ್ಧತಿಗಳನ್ನು ಅನುಸರಿಸಲು ಮತ್ತು ಸಮುದ್ರ ಜೀವಿಗಳು ಹಾಗೂ ಸಸ್ಯಗಳನ್ನು ರಕ್ಷಿಸಲು ಕ್ರಮವಹಿಸಬಹುದು.
3. ಸಾಧ್ಯವಾದಷ್ಟು ಸ್ಥಳೀಯ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆಗಳಿಗೆ ಉತ್ತೇಜನ ನೀಡಬೇಕು ಮತ್ತು ಯಾಂತ್ರೀಕೃತ ಹಾಗೂ ಭಾರೀ ಪ್ರಮಾಣದ ಮೀನಿಗಾರಿಕೆಯನ್ನು ಮಿತಿಗೊಳಿಸಬೇಕು.
4. ಸಮುದ್ರ ಮತ್ತು ಮಹಾಸಾಗರಗಳೊಳಗಿನ ಸಂಪನ್ಮೂಲಗಳನ್ನು ಉಪಯೋಗಿಸುವಾಗ ವಿವಿಧ ಅಂತಾರಾಷ್ಟ್ರೀಯ ಒಪ್ಪಂದಗಳ ವಿಧಿಗಳನ್ನು ಗಮನಿಸಿ, ಅದರ ಅನುಸಾರ ನಡೆಸಬೇಕು.
5. ಸಮುದ್ರದಿಂದ ಹೊರಬಂದು ದಡದಲ್ಲಿ ಬೀಳುವ ವಿವಿಧ ತ್ಯಾಜ್ಯಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವಬಗ್ಗೆ ಸ್ಥಳೀಯ ಸರಕಾರೀ ವಿಭಾಗಗಳೊಂದಿಗೆ ಜಂಟಿಯಾಗಿ ಕಾರ್ಯ ನಿರ್ವಹಿಸಬಹುದು.
6. ಸಮುದ್ರಕ್ಕೆ ತೈಲ ಮತ್ತು ತೈಲ ಸಂಬಂಧಿ ತ್ಯಾಜ್ಯಗಳು ಸೇರದಂತೆ ನೋಡಿಕೊಳ್ಳಬೇಕು
7. ಕಾಲದಿಂದ ಕಾಲಕ್ಕೆ ಸಮುದ್ರ ಮಟ್ಟ ಮತ್ತು ಸಮುದ್ರಕ್ಕೆ ಸಂಬಂಧಿಸಿದಂತೆ ಆಗುವ ಯಾವುದೇ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು ಮತ್ತು ಇದರ ಬಗೆಗಿನ ಮಾಹಿತಿಯನ್ನು ಸಂಬಂಧಿಸಿದ ಸರಕಾರಿ ವಿಭಾಗಗಳಿಗೆ ನೀಡಬೇಕು.

ಇಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಹಕಾರಿ ಸಂಘಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎಸ್‌ಡಿಜಿ 14ರ ಗುರಿಗಳನ್ನು ತಲುಪಲು ಸಹಕರಿಸಬಹುದು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010